ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages:40, 12 ₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume -15
Issue - 09
September - 2018



## ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆ

ಮಾನ್ಯ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಕ್ಯಾಂಶೆಪೂರು ಹಾಗೂ ಪಶುಸಂಗೋಪನ ಸಚಿವ ಶ್ರೀ ವೆಂಕಟರಾವ್ ನಾಡಗೌಡ ಅವರುಗಳಿಗೆ ರಾಜ್ಯದ ಸಹಕಾರಿಗಳ ಪರವಾಗಿ ಸನ್ಮಾನ



ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಶಾಸಕರುಗಳಾದ ಶ್ರೀ ಬಸನಗೌಡ ಪಾಟೀಲ ಯತ್ನಾಳ, ಶ್ರೀ ಮುರುಗೇಶ ನಿರಾಣಿ, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಪ್ರತಾಪಗೌಡ ಪಾಟೀಲ, ಶ್ರೀ ಮಹಂತೇಶ ದೊಡ್ಡಗೌಡರ ಹಾಗೂ ವಿಧಾನ ಪರಿಷತ್ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠ ಇವರುಗಳಿಗೆ ಅಭಿನಂದನೆ.



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಅಧ್ಯಕ್ಷರು



ಶ್ರೀ ಜಗದೀಶ ಕವಟಗಿಮಠ
ಉಪಾಧ್ಯಕ್ಷರು

ಹಾಗೂ ಆಡಳಿತ ಮಂಡಳಿ ಸದಸ್ಯರು



ಬಾರೋ ಮುದ್ದು ಗಣಪ
ಬಾಲಕರೆಲ್ಲರು ಲೀಲೆಯಿಂದಲಿ ಭಜಿಪರು ನಿನ್ನನು
ಹಚ್ಚ ಹಸುರಿನ ಗರಿಕೆ ಪಚ್ಚಬಾಳೆಯ ಹಣ್ಣು ನೆಚ್ಚಿನ ಕಡುಬು
ಆನೆಯ ಮೊಗದವನೆ ಅಂಬಾಪ್ರಿಯಸುತನೆ
ಅಸುಳೆಯ ಕಾಯೊ ಶ್ರೀ ಗಜಮುಖನೆ
ಬಾರಯ್ಯ ಎದ್ದು ಗಣಪ
ಬಾ ಬಾರೋ ಸಿದ್ಧಿ ಗಣಪ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4385

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1180

**ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಗೌರಿ-ಗಣೇಶ ಹಬ್ಬದ ಶುಭಾಶಯಗಳು**



**ಬಿ.ಹೆಚ್. ಕೃಷ್ಣಾರೆಡ್ಡಿ**

> ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ ಗಣ್ಯರು ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ನೀಡುವುದುರ ಜೊತೆಗೆ ಒಂದು ರೀತಿಯ ಎಚ್ಚರಿಕೆಯನ್ನು ನೀಡಿರುವುದನ್ನು ನಾವು ಗಮನಿಸಬೇಕು. ಈ ಕ್ಷೇತ್ರಕ್ಕೆ ನೀಡಿರುವ ಸ್ವಾಯತ್ತತೆ ಸ್ವೇಚ್ಛಾಚಾರವಾಗದಂತೆ ನಮ್ಮ ನಡೆ ನುಡಿ ಕಾರ್ಯಚಟುವಟಿಕೆಗಳತ್ತ ನಾವು ಗಮನ ಹರಿಸುವುದು ಅಗತ್ಯ.

## ಸಂಯುಕ್ತ ಸಹಕಾರಿಯ 17ನೇ ಸಾಮಾನ್ಯ ಸಭೆಯಲ್ಲಿ ಪಾಲೊಂಡ ರಾಜ್ಯದ ಸೌಹಾರ್ದ ಸಹಕಾರಿಗಳ ಉತ್ಸಾಹ ಹಾಗೂ ಪ್ರೋತ್ಸಾಹಗಳಿಗೆ ಹಾಗೂ ಅಭಿನಂದನೆ ಸ್ವೀಕರಿಸಿದ ಸಚಿವರು ಹಾಗೂ ಶಾಸಕರುಗಳಿಗೆ ಕೃತಜ್ಞತೆ

ಸಂಯುಕ್ತ ಸಹಕಾರಿಯ 17ನೇ ಸಾಮಾನ್ಯ ಸಭೆಯಲ್ಲಿ ಪಾಲೊಂಡ ರಾಜ್ಯದ ಸೌಹಾರ್ದ ಸಹಕಾರಿಗಳ ಉತ್ಸಾಹ ಹಾಗೂ ಪೋತ್ಸಾಹಗಳಿಗೆ ಹಾಗೂ ಅಭಿನಂದನೆ ಸ್ವೀಕರಿಸಿದ ಸಚಿವರು ಹಾಗೂ ಶಾಸಕರುಗಳಿಗೆ ಆಡಳಿತ ಮಂಡಳಿ ಕೃತಜ್ಞತೆ ಸಲ್ಲಿಸುತ್ತದೆ. ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ಕೃಷ್ಣಜನ್ಮಾಷ್ಟಮಿ, ಗೌರಿ ಗಣೇಶ ಹಬ್ಬದ ಶುಭಾಶಯಗಳು.

ಆತ್ಮೀಯರೇ, ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆ ಅತ್ಯಂತ ವಿಜ್ರಂಭಣೆ ಹಾಗು ಉತ್ಸಾಹಗಳಿಂದ ಆಚರಿಸಲು ಸಹಕರಿಸಿದ್ದೀರಿ. ಸಾಮಾನ್ಯ ಸಭೆಯ ಕಾರ್ಯಕಲಾಪಗಳು, ವಿಶೇಷವಾಗಿ ನಿಮ್ಮ ಭಾಗವಹಿಸುವಿಕೆ ಗುಣಾತ್ಮಕವಾಗಿತ್ತು. ಸಾಮಾನ್ಯ ಸಭೆಯ ವ್ಯವಸ್ಥೆಗಳು, ಎಲ್ಲ ಕಾರ್ಯಕ್ರಮಗಳು ನಿಮ್ಮ ಪ್ರೋತ್ಸಾಹದಿಂದಲೇ ಅತ್ಯಂತ ಯಶಸ್ವಿಯಾಗಿ ಜರುಗಿವೆ. ಸಾಮಾನ್ಯ ಸಭೆಗೆ ಆಗಮಿಸಿದ ಗಣ್ಯ ಮಾನ್ಯ ಸಚಿವರುಗಳಿಗೆ ಶಾಸಕರಿಗೆ ಹಾಗೂ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಹಾಗು ಭಾಗವಹಿಸಿದ ಇತರೆ ಸಹಕಾರಿಗಳಿಗೆ ನನ್ನ ವ್ಯಯಕ್ತಿಕ, ಹಾಗು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಸಹಕಾರಿ ಬಂಧುಗಳೇ, ಸಂಯುಕ್ತ ಸಹಕಾರಿಯ ಇದುವರೆಗಿನ ಪಯಣದಲ್ಲಿ ಇದೂಂದು ಐತಿಹಾಸಿಕ ಹಾಗೂ ಸ್ಮರಣೀಯ ಪ್ರಸಂಗವೆಂದು ನಾನು ಭಾವಿಸಿದ್ದೇನೆ. ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಬಗ್ಗೆ ಸಾಮಾನ್ಯ ಸಭೆಯಲ್ಲಿ ಅಭಿನಂದಿಸಲ್ಪಟ್ಟ ಮಾನ್ಯ ಸಚಿವರುಗಳು ಮಾನ್ಯ ಶಾಸಕರುಗಳು ವ್ಯಕ್ತಪಡಿಸಿದ ಅಭಿಪ್ರಾಯಗಳು ನಮ್ಮ ಉತ್ಸಾಹವನ್ನು ಇಮ್ಮಡಿಮಾಡಿವೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಶಾಸಕರುಗಳು ವ್ಯಕ್ತಪಡಿಸಿದ ಆತಂಕಗಳಿಗೆ ಮಾನ್ಯ ಸಹಕಾರ ಸಚಿವರು ಸ್ವಂದಿಸಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಬದ್ದತೆಯನು ಘಂಟಾಘೋಷವಾಗಿ ಹೇಳಿರುವುದು ಸಹಕಾರಿಗಳಿಗೆ ಸಮಾಧಾನವನ್ನ ಹಾಗೂ ಸಂತೋಷವನ್ನ ಹೆಚ್ಚಿಸಿದೆ. 17ನೇ ವಾರ್ಷಿಕ ಸಾಮಾನ್ಯ ಸಭೆಯು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಪ್ರಯೋಜನ ಕಾರಿಯಾಗಿವೆ. ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಯೂ ಸೇರಿದಂತೆ ಹಲವಾರಿ ಸಮಸ್ಯೆಗಳಿಗೆ ಪರಿಹಾರ ದೊರಕುವ ನಿಟ್ಟಿನಲ್ಲಿ ಈ ಸಾಮಾನ್ಯ ಸಭೆ ಬೆಳಕು ನೀಡಿದೆ.

ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ ಗಣ್ಯರು ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ನೀಡುವುದುರ ಜೊತೆಗೆ ಎಚ್ಚರಿಕೆ ಒಂದು ರೀತಿಯ ಎಚ್ಚರಿಕೆಯನ್ನು ನೀಡಿರುವುದನ್ನು ನಾವು ಗಮನಿಸಬೇಕು. ಈ ಕ್ಷೇತ್ರಕ್ಕೆ ನೀಡಿರುವ ಸ್ವಾಯತ್ತತೆ ಸ್ವೇಚ್ಛಾಚಾರವಾಗದಂತೆ ನಮ್ಮ ನಡೆ ನುಡಿ ಕಾರ್ಯಚಟುವಟಿಕೆಗಳತ್ತ ನಾವು ಗಮನ ಹರಿಸುವುದು ಅಗತ್ಯ. ಸೌಹಾರ್ದ ಸಹಕಾರಿಗಳ ಸಂಖ್ಯೆಯನ್ನೂ ಹೆಚ್ಚಿಸುವುದರ ಜೊತೆಗೆ ಗುಣಾತ್ಮಕ ಬೆಳವಣಿಗೆಗೆ ಹೆಚ್ಚಿನ ಗಮನ ಹರಿಸಬೇಕು.

ಮುಂಬರುವ ದಿನಗಳಲ್ಲಿ ಸಂಯುಕ್ತ ಸಹಕಾರಿಯು ಹಮ್ಮಿಕೊಂಡಿರುವ ಕ್ರಿಯಾ ಯೋಜನೆಯಂತೆ ಕ್ರಮವಿಡಲು ಎಲ್ಲ ಸೌಹಾರ್ದ ಸಹಕಾರಿಗಳ ಸಮಸ್ಯೆಗಳಿಗೆ ಸ್ಪಂದಿಸಲು ಬದ್ಧವಾಗಿದೆ. ಸಂಯುಕ್ತ ಸಹಕಾರಿಯ ವಿಭಾಗೀಯ ಕಚೇರಿಗಳ ಹಾಗೂ ಜಿಲ್ಲಾ ಸಂಪರ್ಕ ಕಚೇರಿಗಳ ಮೂಲಕ ತಮ್ಮ ಅಹವಾಲುಗಳನ್ನು ಕಳುಹಿಸಿ. ಯಾವುದೇ ಕಾರಣಕ್ಕೂ ಈ ಕ್ಷೇತ್ರದಲ್ಲಿ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳು ಹುಟ್ಟಿಕೊಳ್ಳದಂತೆ ಸದಸ್ಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಕಾರ್ಯನಿರ್ವಹಿಸಿ ಈ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಿ. ತಮ್ಮ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ನಿಮ್ಮ ಪ್ರೋತ್ಸಾಹವೇ ನಮಗೆ ಸ್ಫೂರ್ತಿ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜಿ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ . . .

ಜ್ಞಾನ ಜ್ಯೋತಿ ........................................ 4
17ನೇ ವಾರ್ಷಿಕ ಸಾಮಾನ್ಯ ಸಭೆ ........... 5-11
ಸಂಯುಕ್ತ ಸಹಕಾರಿಯ ಸಮಾಚಾರಗಳು ... 12-27
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 29-31
ಲೇಖನ ................................................ 35
ಆರ್.ಬಿ.ಐ. ನ್ಯೂಸ್ ................................ 39

# ಸಂಪಾದಕೀಯ

## ಇಫ್ಕೊ, ಜನೌಷಧಿ, ವಿಮಾ ಕಂಪನಿಗಳ ಬಳಕೆಯಿಂದ ಸೌಹಾರ್ದ ಸಹಕಾರಿಗಳು ಬಡ್ಡಿಯೇತರ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಅವಕಾಶ

ಸೌಹಾರ್ದ ಸಹಕಾರಿಗಳು ಸಾಂಪ್ರದಾಯಿಕ ವ್ಯವಹಾರಗಳನ್ನು ಮಾಡುವುದರ ಜೊತೆಗೆ ಸದಸ್ಯರ ಅವಶ್ಯಕತೆಗಳನ್ನು ಪೂರೈಸುವ ಸಹಕಾರಿಯ ಇತರೆ ಆದಾಯಗಳನ್ನು ಹೆಚ್ಚಿಸಿಕೊಳ್ಳುವಂತಹ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಸಾಕಷ್ಟು ಅವಕಾಶಗಳಿವೆ.

ಆಧುನಿಕ ಪೈಪೋಟಿ ಯುಗದಲ್ಲಿ ಜಾರಿಯಲ್ಲಿರುವ ಆರ್ಥಿಕ ವ್ಯವಸ್ಥೆಯಲ್ಲಿ ಬಲವಿದ್ದವರೆ ಬದುಕುವರು ಎಂಬುವಂತೆ ಸೌಹಾರ್ದ ಸಹಕಾರಿಗಳು ನಮ್ಮ ಬಲವನ್ನು ಸಧೃಡತೆಯನ್ನು ಹೆಚ್ಚಿಸಿಕೊಂಡಲ್ಲಿ ಪೈಪೋಟಿಯನ್ನು ಎದುರಿಸಲು ಸಾಧ್ಯವಿದೆ. ಈ ಸಂದರ್ಭದಲ್ಲಿ ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು ಸಹಕಾರಿಗಳು ಎಂಥ ವಿಷಮ ಪರಿಸ್ಥಿತಿಯಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಜಗತ್ತಿಗೆ ಸಾರಿ ಹೇಳಿವೆ ಎಂಬುದನ್ನು ಸಹಕಾರಿಗಳು ಮತ್ತೂಮ್ಮೆ ಮೆಲುಕು ಹಾಕಬೇಕಾಗಿದೆ.

ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣಗಳ ಗಾಳಿ ಇದ್ದಾಗ್ಯೂ ಸಹ ನಾವು ಸಹಕಾರಿಗಳು ಹತಾಶೆಯಾಗದೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತ ಬಂದಿದ್ದೇವೆ

ಈಗಿನ ಸನ್ನಿವೇಶದಲ್ಲಿ ಸಹಕಾರಿಗಳು ಇನ್ನೂ ಹೆಚ್ಚು ಸ್ವಾವಲಂಬಿಗಳಾಗಿ ಸಧೃಡವಾಗಿ ಬೆಳೆಯಬೇಕಾಗಿದೆ. ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಿ ಕೇಂದ್ರ ಹಾಗೂ ರಾಜ್ಯಸರಕಾರಗಳ ಮತ್ತು ಸಾರ್ವಜನಿಕರ ಗಮನ ಸೆಳೆಯುವುದು ಅವಶ್ಯಕವಾಗಿದೆ.

ಈ ಹಿನ್ನೆಲೆಯಲ್ಲಿ ಸಹಕಾರಿಗಳು ಕೇಂದ್ರ, ರಾಜ್ಯ ಸರ್ಕಾರದ ಯೋಜನೆಗಳನ್ನು ಅಳವಡಿಸಿಕೊಳ್ಳುವುದು ಅವಶ್ಯಕ ಅವುಗಳಲ್ಲಿ ವಿಶೇಷವಾಗಿ ಕೇಂದ್ರದ ಜನೌಷಧಿ ಯೋಜನೆಯ ಮೂಲಕ ಔಷಧಿಗಳನ್ನು ಮಾರಾಟ ಮಾಡುವುದು, ಇಫ್ಕೋ ರಸಗೊಬ್ಬರ ಕಂಪನಿಯವರಿಂದ ಅನುಮತಿ ಪಡೆದು ರಸಗೊಬ್ಬರಗಳನ್ನು ಮಾರಾಟಮಾಡುವುದು, ವಿಮಾ ಕಂಪನಿಗಳ ಮೂಲಕ ಸದಸ್ಯರಿಗೆ ವಿಮಾಯೋಜನೆಗಳನ್ನು ಒದಗಿಸುವುದು ಹಾಗೂ ಇನ್ನಿತರ ಅನೇಕ ಯೋಜನೆಗಳು ಸದಸ್ಯರ ಸಾರ್ವಜನಿಕ ಸೇವೆ ಹಾಗೂ ಲಾಭದಾಯಕ ಚಟುವಟಿಕೆಯಾಗಿದೆ.

ಹೆಚ್ಚುವರಿ ಬಂಡವಾಳ ಹೂಡಿಕೆಯ ಅವಶ್ಯಕತೆ ಇರುವುದಿಲ್ಲ. ಮಾರ್ಗದರ್ಶನ ಮಾಡುವುದಕ್ಕೆ ಕಂಪನಿಗಳೇ ನಿಮ್ಮ ಹತ್ತಿರ ಬಂದು ವಿವರಣೆ ಹಾಗೂ ಪ್ರಾರಂಭಿಕ ಸಹಾಯ ಮಾಡುವುದರಿಂದ ಸಹಕಾರಿಗಳು ಆತಂಕ ಪಡೆಬೇಕಾದುದಿಲ್ಲ. ಈ ನಿಟ್ಟಿನಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರು ಕ್ರಮವಿಡುತ್ತಾರೆಂದು ಆಶಿಸಲಾಗಿದೆ.



# ಜ್ಞಾನ ಜ್ಯೋತಿ

▸▸ ಶ್ರೀ ಎಂ.ಬಸಪ್ಪ

## ಅದಮ್ಯ ಅಗೋಚರ ಶಕ್ತಿಯ ಆಶ್ರಯಿಸಿ ಸಹಕಾರಿಯಾಗಿ ಬಾಳು

ಮಂಕು ತಿಮ್ಮನ ಕಗ್ಗದಿಂದ

ವಿಶಾಲ ವಿಶ್ವದದತ್ತ ಹುಡುಕುಕಣ್ಣುಗಳಿಂದ ನಮ್ಮ ವಿಸ್ತೃತ ಗಮನವನ್ನು ಹರಿಸಿದಾಗ ವಿಸ್ಮಯಗಳ ಸರಮಾಲೆಯೇ ವ್ಯಕ್ತವಾಗುತ್ತದೆ. ಹರಿದಾಡುವ ಅತಿ ಕಿರುಪ್ರಾಣಿ ಇರುವೆಗೆ ಹೃದಯ, ಕಣ್ಣು, ಕಾಲು, ಕೈ ಹೀಗೆ ವಿವಿಧಾಂಗಗಳನ್ನು ಜೋಡಿಸಿದವರಾರು? ತೆಂಗಿನಮರದ ಅರಳಾಗಿ ಜನಿಸಿದ ಎಳೆನೀರಿಗೆ ಧರೆಯಿಂದ ಸಿಹಿನೀರು ಅದ್ಯಾವ ಅದ್ಭುತಶಕ್ತಿಯಿಂದ ಮೇಲಕ್ಕೇರಿಸಲ್ಪಟ್ಟು ಮತ್ತೆ ಕೆಳಗೆ ಹರಿಯದಂತೆ ಸಂಗ್ರಹವಾಯಿತೆಂಬ ಹಲವು ಪರಮಾದ್ಭುತಗಳನ್ನು ವೀಕ್ಷಿಸಿದ ಸಂತಕವಿ ಡಿ.ವಿ.ಜಿಯವರು ಭಗವಂತನ ಅಸ್ತಿತ್ವ ಹರವುಗಳನ್ನು ಈ ಕೆಳಗಿನ ಪದ್ಯದಲ್ಲಿ ವಿವರಿಸಿದ್ದಾರೆ :

**"ಮೇಲೆ ಕೆಳಗೊಳಗೆ ಬಳಿ ಸುತ್ತಲೆತ್ತೆತ್ತಲುಂ**
**ಮೂಲೆ ಮೂಲೆಯಲಿ ವಿದ್ಯುಲ್ಲಹರಿಯೊಂದು**
**ಧೂಲಿಕಣ ಭೂಗೋಳ ರವಿಚಂದ್ರ ತಾರೆಗಳ**
**ಚಾಲಿಸುದು ಬಿಡುಗೊಡದೆ" ॥ಮಂಕುತಿಮ್ಮ॥**

ಇದೇ ಪರಮಾತ್ಮನ ಸರ್ವಾಂತರ್ಯಾಮಿತ್ವವನ್ನು ದಾಸಶ್ರೇಷ್ಠ ಕನಕದಾಸರು, ತನ್ನ ಗುರುಗಳೋರ್ವರು ಎಲ್ಲ ವಿದ್ಯಾರ್ಥಿಗಳಿಗೂ ಬಾಳೆಹಣ್ಣೊಂದಂದನ್ನು ಕೊಟ್ಟು "ಯಾರೂ ಇಲ್ಲದ ಜಾಗದಲ್ಲಿ ತಿಂದುಬನ್ನಿ" ಎಂದಾಗ ಒಬ್ಬೊಬ್ಬ ವಿದ್ಯಾರ್ಥಿಯು ತಾವುಗಳು ಬಾಳೆಹಣ್ಣು ತಿಂದ ವಿವಿಧ ಸ್ಥಳಗಳನ್ನು ಹೆಸರಿಸಿದರೆ ಕನಕಮಹಿಮರು ದೇವರಿಲ್ಲದ ಜಾಗವಿಲ್ಲವೆಂಬ ವ್ಯಾಪಕಸತ್ವವನ್ನು ಮನಗಂಡು ಹಣ್ಣನ್ನು ತಿನ್ನದೆಯೇ ಹಿಂತಿರುಗಿಸಿದ ಉದಾಹರಣೆ ಸ್ಮರಿಸಬಹುದು. ಭಗವದ್ಗೀತೆಯ 13ನೇ ಅಧ್ಯಾಯದ 14ನೇ ಶ್ಲೋಕದಲ್ಲಿ ಇದೇ ಅಂಶಕ್ಕೆ ಒತ್ತುನೀಡುತ್ತಾ,

**"ಸರ್ವತಃ ಪಾಣಿಪಾದಂ ತತ್ ಸರ್ವತೋಕ್ಷಿಶಿರೋಮುಖಂ**
**ಸರ್ವತಃ ಶೃತಿಮಲ್ಲೋಕೇ ಸರ್ವಂಮಾವೃತ್ಯತಿಷ್ಠತಿ"**

ಅಂದರೆ ಸರ್ವೋತ್ತಮದೇವನ ಕೈಕಾಲು ಕಣ್ಣು ಬಾಯಿ ಕಿವಿಗಳು ಎಲ್ಲೆಡೆಯೂ ಇದ್ದು ವಿಶ್ವದಲ್ಲಿಯ ಎಲ್ಲವನ್ನೂ ಅವ್ಯಾಹತವಾಗಿ (All Pervading) ವ್ಯಾಪಿಸಿದೆಯೆನ್ನುತ್ತದೆ.

ನಾವಿರುವ ಈ ಪ್ರಪಂಚದ ಎಲ್ಲಾ ಭಾಗಗಳಲ್ಲೂ ಸರ್ವವ್ಯಾಪಕವಾಗಿ, ಸರ್ವಶಕ್ತನಾಗಿ, ಸರ್ವಜ್ಞನಾಗಿ ಮೇಲೆ, ಕೆಳಗೆ, ಒಳಗೆ, ಹತ್ತಿರ, ಸುತ್ತಮುತ್ತಲೂ, ಮಿಂಚಿನ ಹರಿದಾಟದಂತೆ ಆವರಿಸಿಕೊಂಡು ಈ ಸಮಸ್ತ ವಿಶ್ವದ ಅಣುಕಣಗಳಲ್ಲೂ ವ್ಯಾಪಿಸಿರುವುದಲ್ಲದೇ ತಾರಂಬರಾದಿ ಸೂರ್ಯ, ಚಂದ್ರ, ನಕ್ಷತ್ರಗಳನ್ನು ಬಿಡುವಿಲ್ಲದೆ ಚಲಿಸುವಂತೆ ಮಾಡುತ್ತಿರುವ ಅಧಮ್ಯ ಅಗೋಚರ ಶಕ್ತಿ ಯಾವುದೆಂಬುದರತ್ತ ನಮ್ಮ ಗಮನ ಹರಿಸಬೇಕೆಂಬುದು ಡಿ.ವಿ.ಜಿಯವರ ಸಂದೇಶ.

ವಿವಿಧ ಧರ್ಮಗಳ ಸಾಹಿತ್ಯಗಳು ದೇವರ ಕರ್ತೃತ್ವ, ವ್ಯಾಪಕತ್ವ, ಸರ್ವಶಕ್ತತೆ ಹಾಗೂ ಸರ್ವಜ್ಞತ್ವಗಳ ಬಗ್ಗೆ ವಿಷದವಾಗಿ ಮನಮುಟ್ಟುವಂತೆ ವಿವರಿಸಿದ್ದರೂ ಅದ್ಯಾಕೋ ನಾವಿನ್ನೂ ಆತನ ಇರುವನ್ನು ಅರಿಯದವರಾಗಿದ್ದೇವೆಂಬ ಅನಿಸಿಕೆಯನ್ನು ಗ್ರಹಿಸಿದ ಡಿ.ವಿ.ಜಿ.ಯವರು ಭಗವಂತನ ಇರುವನ್ನು ಅರಿತು ನಿಮ್ಮ ನಿಮ್ಮಗಳ ಆತ್ಮದ ಬಗೆಗಿನ ಅರಿವನ್ನು ಪಡೆದು ಸರ್ವಮಾನವರೂ ಸಹೋದರರಂತೆ ಬದುಕಿ "ಭೂ ಉಪಗ್ರಹವನ್ನು ದೈವಾನುಗ್ರಹ"ದ ಕೇಂದ್ರವನ್ನಾಗಿಸಲು ಪ್ರಯತ್ನಿಸಲು ಕರೆಕೊಡುತ್ತಾ ಸರ್ವರ ಶುಭಾಕಾಂಕ್ಷಿ ಕ್ಷೇತ್ರವಾದ "ಸಹಕಾರ" ಜೀವನವನ್ನು ಅನುಸರಿಸಿರೆಂದು "ಒಟ್ಟು ಬಾಳ್ವದ ಕಲಿಯೋ" "ತಬ್ಬಿಕೊಳೊ ವಿಶ್ವವನು" ಎಂಬಂಶಗಳನ್ನರಿಯುವ ಮೂಲಕ ಮೌಲ್ಯಗುಣ ಪೂರ್ಣಪ್ರಜೆಗಳಾಗಿ ಸರ್ವಾಂಗ ಸುಂದರರಾಷ್ಟ್ರ ನಿರ್ಮಾಣಕ್ಕೆ ಆಧಾರ ವ್ಯಕ್ತಿಗಳಾಗಿರೆಂಬುದು ಈ ಪದ್ಯದ ಸಂದೇಶ.

## ಸೌಹಾರ್ದ ಸಹಕಾರಿಗಳ ಗಮನಕ್ಕೆ

ಆಗಸ್ಟ್ ಮಾಹೆಯಲ್ಲಿ ಅನೇಕ ಸೌಹಾರ್ದ ಸಹಕಾರಿಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಯನ್ನು ಜರುಗಿಸಿ ವರದಿ ಹಾಗೂ ಫೋಟೋ ಕಳುಹಿಸಿದೀರಿ. ಅದರಂತೆ ಸ್ವಾತಂತ್ರ್ಯ ದಿನವನ್ನು ಆಚರಿಸಿದ ಬಗ್ಗೆಯೂ ಫೋಟೋ ಹಾಗೂ ವರದಿಗಳನ್ನು ಕಳುಹಿಸಿರುವುದಕ್ಕೆ ಧನ್ಯವಾದಗಳು. ಇವೆಲ್ಲವುಗಳನ್ನು ಒಂದೇ ಸಂಚಿಕೆಯಲ್ಲಿ ಸ್ಥಳಾಭಾವದಿಂದ ಪ್ರಕಟಿಸಲು ಸಾಧ್ಯವಾಗದಿರುವುದಕ್ಕೆ ವಿಷಾದಿಸುತ್ತೇವೆ.

## ವೈವಿಧ್ಯಮಯ ಹಾಗೂ ಅರ್ಥಪೂರ್ಣ ಚಟುವಟಿಕೆಗಳೊಂದಿಗೆ ಜರುಗಿದ

# ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆ

## (ವಾರ್ಷಿಕ ಮಹಾಸಭೆ ನಂತರದಲ್ಲಿ ಜರುಗಿದ ಸಚಿವರು ಹಾಗೂ ಶಾಸಕರುಗಳ ಅಭಿನಂದನಾ ಸಭೆ)



ಸಂಯುಕ್ತ ಸಹಕಾರಿಯ 17ನೇ ಸಾಮಾನ್ಯ ಸಭೆಯಲ್ಲಿ ಪಾಲೊಂಡು ಅಭಿನಂದನೆ ಸ್ವೀಕರಿಸಿದ ಸಹಕಾರ ಸಚಿವ ಬಂಡೆಪ್ಪ ಕಾಶ್ಯಂಪೂರು, ಪಶುಸಂಗೋಪನ ಸಚಿವ ಶ್ರೀ ವೆಂಕಟರಾವ್ ನಾಡಗೌಡ ಹಾಗೂ ಶಾಸಕರುಗಳಾದ ಶ್ರೀ ಬಸನಗೌಡ ಪಾಟೀಲ ಯತ್ನಾಳ, ಶ್ರೀ ಮುರುಗೇಶ ನಿರಾಣಿ, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಪ್ರತಾಪಗೌಡ ಪಾಟೀಲ, ಶ್ರೀ ಮಹಂತೇಶ ದೊಡ್ಡಗೌಡರ ಹಾಗೂ ವಿಧಾನ ಪರಿಷತ್ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠ ಇವರುಗಳಿಗೆ ಕೃತಜ್ಞತೆ.

## ಗುಜರಾತ್ ಹಾಗೂ ಮಹಾರಾಷ್ಟ ರಾಜ್ಯಗಳ ಸಹಕಾರ ಕ್ಷೇತ್ರವನ್ನ ಮೀರಿಸುವಂತೆ ಕರ್ನಾಟಕ ಸಹಕಾರ ಕ್ಷೇತ್ರವನ್ನ ಬೆಳಸುವ ಪ್ರಯತ್ನ - ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಯಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲ - ಶ್ರೀ ಬಂಡೆಪ್ಪ ಕಾಶ್ಯಂಪೂರ



ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆಯ ನಂತರ ನಡೆದ ವಿಶೇಷ ಕಾರ್ಯಕ್ರಮ ಸಚಿವರು ಹಾಗೂ ಶಾಸಕರುಗಳ ಅಭಿನಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಧ್ಯಕ್ಷತೆ ವಹಿಸಿ ಮಾತನಾಡಿದ ಸಹಕಾರ ಸಚಿವ ಬಂಡೆಪ್ಪ ಕಾಶ್ಯಂಪೂರುರವರು ರಾಜ್ಯದ ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುದನ್ನು ಗಮನಿಸುತ್ತೀದ್ದೇನೆ.

ರಾಜ್ಯದ ಸಹಕಾರ ಕ್ಷೇತ್ರವನ್ನ ಗುಜರಾತ್ ಹಾಗೂ ಮಹಾರಾಷ್ಟ ರಾಜ್ಯಗಳ ಸಹಕಾರ ಕ್ಷೇತ್ರಕಿಂತಲೂ ಉತ್ತಮವಾಗಿ ಬೆಳಸುವ ಅಶಾಭಾವನೆಯನ್ನು ಹೊಂದಿದ್ದೇನೆ. ರಾಜ್ಯದ 4350 ಸೌಹಾರ್ದ ಸಹಕಾರಿಗಳ ಮೂಲಕ 55 ಸಾವಿರಕ್ಕೂ ಹೆಚ್ಚು ಯುವಕರಿಗೆ ಉದ್ಯೋಗ ನೀಡಿರುವುದು ಶ್ಲಾಘನೀಯ ಜೊತೆಗೆ ಸಾಮಾಜಿಕ ಬದ್ದತೆ ಅನೇಕ ಜನಪರ ಕೆಲಸಗಳನ್ನ ನಿರ್ವಹಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ. ಈ ಕ್ಷೇತ್ರದ ಬೆಳವಣಿಗೆಗೆ ಸರ್ಕಾರದ ಸಂಪೂರ್ಣ ಬೆಂಬಲ ಇದೆ ಇದುವರೆಗೆ ಈ ಉಪಸ್ಥಿತರಿರುವ ಶಾಸಕರುಗಳು ವ್ಯಕ್ತಪಡಿಸಿರುವ ಅಭಿಪ್ರಾಯ ಹಾಗೂ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಅಡಳಿತ ಮಂಡಳಿಯವರು ನೀಡಿರುವ ಮನವಿಯಲ್ಲಿರುವ ಅಂಶಗಳನ್ನು ಪರಿಗಣಿಸಿ ಈ ಕ್ಷೇತ್ರದ ಬೆಳವಣಿಗೆ ಪೂರಕವಾಗುವಂತೆ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಗಳನ್ನ ತರುವಲ್ಲಿ ಎಲ್ಲಾರು ಜೊತೆಗೂಡಿ ಒಂದು ಸಭೆಯನ್ನ ಜರುಗಿಸಿ ನಂತರ ಅಗತ್ಯವಾದ ಕ್ರಮವನ್ನ ತೆಗೆದುಕೊಳ್ಳಲಾಗುವುದು ಇದಕ್ಕಾಗಿ ಸಹಕಾರಿಗಳು ಅತಂಕ ಪಡಬೇಕಾಗಿ ಇಲ್ಲವೆಂದು ತಿಳಿಸಿದರು.

ಇದರ ಜೊತೆಗೆ ಈಗಾಗಲೇ ರಾಜ್ಯದ ರೈತರಿಗೆ ಸಾಲಮನ್ನ ಯೋಜನೆ ಜಾರಿಮಾಡಿದೆ ಇನ್ನೂ ಹೆಚ್ಚು ರೈತರಿಗೆ ಅನುಕೂಲವಾಗುವಂತೆ ವಾಣಿಜ್ಯ ಬ್ಯಾಂಕುಗಳಿಂದಲೂ 30.000ಸಾವಿರ ಕೋಟಿ ಸಾಲಮನ್ನಗೆ ಕ್ರಮವಿಡಲಾಗುತ್ತಿದೆ. ಬೀದಿ ವ್ಯಾಪರಿಗಳಿಗೆ ಬಡ್ಡಿ ಇಲ್ಲದೆ ಹಾಗೂ ಭದ್ರತೆ ಇಲ್ಲದೆ 10000 ಸಾವಿರ ರೂಗಳ ವರೆಗೆ ಸಾಲ ನೀಡುವ ಮಹಾತ್ವಾಕಾಂಕ್ಷಿ ಯೋಜನೆಗಳನ್ನ ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲಕವು ಜಾರಿಮಾಡಬಹುದಾಗಿದೆ. ಈ ಯೋಜನೆಯಲ್ಲಿ ಸರ್ಕಾರವೇ ಸಾಲಕ್ಕೆ ಬಡ್ಡಿ ಹಾಗೂ ಭದ್ರತೆಯನ್ನ ನೀಡುತ್ತದೆವೆಂದು ತಿಳಿಸಿದರು. ಈ ಕ್ಷೇತ್ರದ ಬೆಳವಣಿಗೆ ಜನರ ವಿಶ್ವಾಸ ಅತ್ಯಂತ ಮುಖ್ಯ ಅದನ್ನ ಗಳಿಸುವಲ್ಲಿ ಸಹಕಾರಿಗಳು ಪ್ರಯತ್ನಿಸಬೇಕುವೆಂದು ತಿಳಿಸಿದರು.

## ಸಹಕಾರಿ ಕ್ಷೇತ್ರ ಬೆಳವಣಿಗೆಯಲ್ಲಿ ನಿರ್ದೇಶಕರ ಜವಾಬ್ಧಾರಿ ಮಹತ್ವದ್ದು - ಸಚಿವ ಶ್ರೀ ವೆಂಕಟರಾವ್ ನಾಡಗೌಡ



ಸಚಿವರು ಹಾಗೂ ಶಾಸಕರುಗಳ ಅಭಿನಂದನಾ ಕಾರ್ಯಕ್ರಮದ ಉದ್ಘಾಟನೆಯನ್ನ ನೇರವೇರಿಸಿದ ಪಶುಸಂಗೋಪನ ಸಚಿವ ಶ್ರೀ ವೆಂಕಟರಾವ್ ನಾಡಗೌಡರವರು ಮಾತನಾಡಿ ಸಹಕಾರಿ ಕ್ಷೇತ್ರ ಅತ್ಯಂತ ಪವಿತ್ರವಾದ ಕ್ಷೇತ್ರ ಸಾರ್ವಜನಿಕರಿಗೆ ಸೇವೆಯನ್ನು ನೀಡುವ ಸಂಸ್ಥೆಗಳಾಗಿವೆ. ಲಾಭಾಗಳಿಸುವುದು ಮುಖ್ಯ ಉದ್ದೇಶವಾಗಿರುವುದಿಲ್ಲ ಸಂಸ್ಥೆಯ ನಿರ್ವಹಣೆಗಾಗಿ ಮಾತ್ರ ಲಾಭ ಬೇಕಾಗುತ್ತದೆ. ಇದರಲ್ಲಿ ಸಂಸ್ಥೆಯನ್ನ ನಡೆಸುವ ಅಧ್ಯಕ್ಷರು, ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿಯವರು ಹೊಂದಾಣಿಕೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಯಾವುದೇ ಒಂದು ಸಹಕಾರಿ ಸಂಸ್ಥೆ ಕೆಟ್ಟ ಕೆಲಸ ಮಾಡಿದರೆ ಎಲ್ಲಾ ಸಂಸ್ಥೆಗಳನ್ನು ಅದೇ ದೃಷ್ಟಿಯಿಂದ ದೂರುವುದು ಸರಿಯಲ್ಲ ಸಂಸ್ಥೆಗಳಲ್ಲಿ ನೌಕರರಿಗೆ ಕೆಲಸ ಮಾಡುವ ಪರಿಸರವನ್ನ ಒದಗಿಸಬೇಕಾಗುತ್ತದೆ. ಕಾರ್ಯಚಟುವಟಿಕೆಗಳನ್ನ ವಿಸ್ತರಿಸಬೇಕು. ವಿವಿಧ ಚಟುವಟಿಕೆಗಳನ್ನ ಹಮ್ಮಿಕೊಳ್ಳಬೇಕುವೆಂದು ಹೇಳುತ್ತ ತಾವು ಸುದೀರ್ಘ ಕಾಲ ಕೆ.ಒ.ಎಫ್.ನ ಅಧ್ಯಕ್ಷರಾಗಿ ವರ್ಗಿಸ್ ಕುರಿಯನ್‌ಯವರ ಜೊತೆಯಲ್ಲಿ ಕಾರ್ಯ ನಿರ್ವಹಿಸಿದ ಅನುಭವಗಳನ್ನ ಹಚ್ಚಿಕೊಡ್ಡರು. ಇಸ್ರೇಲ್ ನಲ್ಲಿ ಖಿಬೋಸ್ ನವರ ಘೋಷಣೆ A drop of water and a minute to Isrel converts it to dollar ಅದ್ದರೆ ಇಸ್ರೇಲ್ ನವರು ಒಂದು ಹನಿ ನೀರನ್ನು ಹಾಗೂ ಒಂದು ನಿಮಿಷ ಸಮಯವನ್ನ ಸಹ ಉತ್ಪಾದನೆಯಲ್ಲಿ ಉಪಯೋಗಿವುದನ್ನ ನಾವು ಸಹಕಾರಿಗಳು ಅರ್ಥ ಮಾಡಿಕೊಳ್ಳಬೇಕೆಂದು ತಿಳಿಸಿದರು ಮತ್ತು ರಾಜ್ಯದ ಸೌಹಾರ್ದ ಸಹಕಾರಿಗಳ ಕ್ಷೇತ್ರ ಅತ್ಯಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತೀದೆ. ಇನ್ನೂ ಎತ್ತರಕ್ಕೆ ಬೆಳಯಲಿ ಎಂದು ಹಾರೈಸಿದರು.

ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರು ಸಹಕಾರ ಸಚಿವ ಬಂಡೆಪ್ಪ ಕಾಶ್ಯಂಪೂರು, ಪಶುಸಂಗೋಪನ ಸಚಿವ ಶ್ರೀ ವೆಂಕಟರಾವ್ ನಾಡಗೌಡ ಇವರುಗಳನ್ನ ಶಾಲು ಹೊದಿಸಿ ನೆನಪಿಣ ಕಾಣಿಕೆಯನ್ನ ನೀಡಿ ಅಭಿನಂದಿಸಿದರು.

## ಪ್ರಕಟಣೆಗಳ ಬಿಡುಗಡೆ



ಮಾನ್ಯ ಸಹಕಾರ ಸಚಿವ ಬಂಡೆಪ್ಪ ಕಾಶ್ಯಂಪೂರು, ಪಶುಸಂಗೋಪನ ಸಚಿವ ಶ್ರೀ ವೆಂಕಟರಾವ್ ನಾಡಗೌಡ ರವರು ಸಂಯುಕ್ತ ಸಹಕಾರಿಯ ಪ್ರಕಟಣೆಗಳಾದ ಸೌಹಾರ್ದ ಸಹಕಾರಿಗಳಿಗೆ ಅಗತ್ಯವಾಗುವ 1. ಮಾದರಿ ನಮೂನೆಗಳು (ವಿವಿಧ ಪುಸ್ತಕಗಳ ನಮೂನೆಗಳು, ಶೇರು ಅರ್ಜಿ, ಸಾಲದ ಅರ್ಜಿ, ಸಾಲ ವಸೂಲಾತಿ ಪಾರ್ಮ್‌ಗಳು, ವಿವಿಧ ಠೇವಣಾತಿ ನಮೂನೆಗಳು ಇತ್ಯಾಧಿ) 2. ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಾಜಗಳ ಬಗ್ಗೆ "ಶ್ರೇಷ್ಠ ನ್ಯಾಯಲಯ ಹಾಗೂ ಉಚ್ಚ ನ್ಯಾಯಲಯದ" ತೀರ್ಪುಗಳ ಸಾರಾಂಶಗಳು ಭಾಗ–2 ಬರೆದವರು ಶ್ರೀ ಸಿ.ಎನ್. ಪರಶೀವ ಮೂರ್ತಿ, ನಿವೃತ ಅಪರ ನಿಬಂಧಕರು 3. ಆದಾಯ ತೆರಿಗೆ ಇಲಾಖೆ ವಿರುದ್ದವಾಗಿ ಸಹಕಾರಿಗಳ ಪರವಾಗಿ ಆಗಿರುವ ತೀರ್ಪುಗಳ ಸಂಗ್ರಹ ಪುಸ್ತಕ Summary of Income Tax judgements in favour of cooperative societies compiled by Sri Madukar hedge, charted accountant Bangalore, Sri B.V. Ravidranath, charted accountant sagar and others. 4. RTI JUDGEMENTS compiled by Sri C.N. Parashivamurty ಇವುಗಳನ್ನ ಬಿಡುಗಡೆ ಮಾಡಿದರು.

# ನೆರೆ ಸಂತ್ರಸ್ತರ ಸಹಾಯಕ್ಕೆ ಸೌಹಾರ್ದ ಸಹಕಾರಿಗಳ ಕೊಡುಗೆ



ಕೇರಳ ಹಾಗೂ ಕೊಡಗು ನೆರೆ ಸಂತ್ರಸ್ತರಿಗಾಗಿ ಮುಖ್ಯಮಂತ್ರಿ ಸಹಾಯ ನಿಧಿಗೆ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿ ವತಿಯಿಂದ ರೂ 25 ಲಕ್ಷ ಚೆಕ್ಕನ್ನು ಮಾನ್ಯ ಸಹಕಾರ ಮಂತ್ರಿಗಳಿಗೆ ನೀಡಲಾಯಿತು.

ಸಭೆಯಲ್ಲಿ ಶಾಸಕರುಗಳಾದ ಶ್ರೀ ಬಸನಗೌಡ ಪಾಟೀಲ ಯತ್ನಾಳ, ಶ್ರೀ ಮುರುಗೇಶ ನಿರಾಣಿ, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಪ್ರತಾಪಗೌಡ ಪಾಟೀಲ, ಶ್ರೀ ಮಹಂತೇಶ ದೊಡ್ಡಗೌಡರ ಹಾಗೂ ವಿಧಾನ ಪರಿಷತ್ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠ ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲಿ ಅಗತ್ಯವಾಗಿ ಅಗಬೇಕಿರುವ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಸೇರಿದಂತೆ ಅಲವಾರು ವಿಷಯಗಳಾನ್ನ ಮಾನ್ಯ ಸಹಕಾರ ಸಚಿವರ ಗಮನಕ್ಕೆ ತಂದರು.

**ಶ್ರೀ ಬಸನಗೌಡ ಪಾಟೀಲ ಯತ್ನಾಳನವರು** ಮಾತನಾಡಿ ಸಹಕಾರ ಕ್ಷೇತ್ರದಲ್ಲಿ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸಹಕಾರ ಇಲಾಖೆ ತನ್ನ ನಿಯಂತ್ರಣವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಅತಂಕವಾಗಿದೆ. ಇದು ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಅಶಯಕ್ಕೆ ವಿರುದ್ಧವಾಗಿದೆ ಇದರ ಬಗ್ಗೆ ಸಹಕಾರ ಸಚಿವರು ಗಮನ ಅರಿಸಬೇಕೆಂದು ತಿಳಿಸಿದರು.

**ವಿಧಾನ ಪರಿಷತ್ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠ** ರವರು ಮಾತನಾಡಿ ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಉತ್ತಮ ಸೌಕರ್ಯಗಳು ಅಗತ್ಯ ಒಬ್ಬ ಉತ್ತಮ ಕಾರ್ಯನಿರ್ವಹಕರು ಇರಬೇಕಾಗುತ್ತದೆವೆಂದು ತಿಳಿಸುತ್ತ ತಾವು ಕರ್ನಾಟಕ ಶೇಷ್ಠ ನ್ಯಾಯಲದ ನಿವೃತ ಮುಖ್ಯ ನಾಯಧೀಶರಾದ ಶ್ರೀ ಮಳೀಮಠ ಹಾಗೂ ಟಾಟಾ ಕಂಪನಿಯ ಮುಖ್ಯಸ್ಥ ಶ್ರೀ ರತನ್ ಟಾಟಾರವರ ನಡುವೆ ನಡೆದ ಸಂಭಾಷಣೆಯ ಮುಖ್ಯಾಂಶವನ್ನ ತಿಳಿಸುತ್ತ ಟಾಟಾ ಕಂಪನಿಯ ಎಲ್ಲಾ ವ್ಯವಹಾರಗಳ ಅಭಿವೃದ್ಧಿಗೆ ನಿರಂತರ ಬೆಳವಣಿಗೆಗೆ ಒಬ್ಬ ಉತ್ತಮ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವಶ್ಯಕತೆಯನ್ನು ತಿಳಿಸಿದರು.







**ಮಾಜಿ ಸಚಿವ ಹಾಗೂ ಶಾಸಕ ಶ್ರೀ ಮುರುಗೇಶ ನಿರಾಣಿಯವರು** ಮಾತನಾಡಿ ಸಂಯುಕ್ತ ಸಹಕಾರಿ ವಾರ್ಷಿಕ ಮಹಾಸಭೆ ಇಷ್ಟೊಂದು ಅಚ್ಚುಕಟ್ಟಾಗಿ ನಡೆಸಿರುವುದಕ್ಕೆ ಸಂಯುಕ್ತ ಸಹಕಾರಿಯನ್ನು ಅಭಿನಂದಿಸುತ್ತೇನೆ. ಸಂಯುಕ್ತ ಸಹಕಾರಿಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತೀದೆ. ಸೌಹಾರ್ದ ಸಹಕಾರಿಗಳ ನಿರ್ದೇಶಕರು ಹಾಗು ಸಿಬ್ಬಂದಿಗಳಿಗೆ ಇನ್ನೂ ಹೆಚ್ಚಿನ ತರಬೇತಿ ವ್ಯವಸ್ಥೆ ಮಾಡಬೇಕೆಂದು ತಿಳಿಸಿದರು.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಾಕವಾಗುವ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಅಗತ್ಯವಾಗಿ ಜಾರಿಗೆ ಬರಬೇಕು. ಸಹಕಾರಿ ಸಂಸ್ಥೆಗಳು ಸಾಮಾನ್ಯ ಮನುಷ್ಯನ ಆರ್ಥಿಕ ಅಭಿವೃದ್ಧಿಗೆ fine- answer ಅಂದರೆ Financer ಆಗಿ ಕಾರ್ಯನಿರ್ವಹಿಸುತ್ತೀವೆ ಇವುಗಳ ಕಾರ್ಯಚರಣೆಯಲ್ಲಿ ಯಾವುದೇ ರೀತಿಯ ತೊಂದರೆಯಾದಲ್ಲಿ ಶ್ರೀ ಸಾಮಾನ್ಯನ ಆರ್ಥಿಕ ಅಭಿವೃದ್ಧಿ ಕುಂಠೀತವಾಗುತ್ತದೆವೆಂದು ತಿಳಿಸಿದರು.

## ಮನವಿ ಪತ್ರ ಸಲ್ಲಿಕೆ

ರೈತಗೀತೆಯೊಂದಿಗೆ ಅಭಿನಂಧನಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು ಸಂಯುಕ್ತ ಸಹಕಾರಿಯ ಅಧ್ಯಕ್ಷ ಬಿ.ಹೆಚ್. ಕೃಷ್ಣಾರೆಡ್ಡಿಯವರು ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಮಹಾಸಭೆಯ ನಂತರದಲ್ಲಿ ವ್ಯವಸ್ಥೆ ಮಾಡಲಾದ ಈ ಅಭಿನಂದನಾ ಕಾರ್ಯಕ್ರಮಕ್ಕೆ ಆಗಮಿಸಿದ ಸಹಕಾರ ಸಚಿವ ಬಂಡೆಪ್ಪ ಕಾಶ್ಯಂಪೂರು, ಪಶುಸಂಗೋಪನ ಸಚಿವ ಶ್ರೀ ವೆಂಕಟರಾವ್ ನಾಡಗೌಡ ಹಾಗೂ ಶಾಸಕರುಗಳಾದ ಶ್ರೀ ಬಸನಗೌಡ ಪಾಟೀಲ ಯತ್ನಾಳ, ಶ್ರೀ ಮುರುಗೇಶ ನಿರಾಣಿ, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಪ್ರತಾಪಗೌಡ ಪಾಟೀಲ, ಶ್ರೀ ಮಹಂತೇಶ ದೊಡ್ಡಗೌಡರ ಹಾಗೂ



**ಮಾನ್ಯ ಶಾಸಕರಾದ ಶ್ರೀ ಅರಗ ಜ್ಞಾನೇಂದ್ರ ರವರು** ಮಾತನಾಡಿ ಇತ್ತೀಚೆಗೆ ಸರ್ಕಾರ ಸಾಲಮಾನ್ನದ ಮಾರ್ಗದರ್ಶಿ ಸುತ್ತೋಲೆ ಸಹಕಾರ ಸಂಘ ಹಾಘೂ ಬ್ಯಾಂಕುಗಳಲ್ಲಿ ರೈತರು ಠೇವಣಿಗಳನ್ನ ಇಡದಂತೆ ಮಡಿದೆ ಈ ಸುತ್ತೋಲೆ ರೈತರ ಠೇವಣಿಗಳಿಗೆ ಭಾದಕವನ್ನು ಉಂಟುಮಾಡಿದೆ ಇದನ್ನು ತಕ್ಷಣೆವೇ ವಾಪಸ್ಸು ತೆಗೆದುಕೊಳ್ಳಬೇಕು ಇಲ್ಲವಾದರೆ ಸಹಕಾರ ಸಂಸ್ಥೆಗಳಲ್ಲಿ ಯಾರು ಠೇವಣಿಗಳನ್ನ ಇಡಲು ಮುಂದೆ ಬರುವುದಿಲ್ಲವೆಂದು ತಿಳಿಸುತ್ತ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನ ಅಸ್ಪ್ರಶ್ಯರಾಗಿ ಕಾಣುವ ಪ್ರವೃತ್ತಿ ನಿಲ್ಲಬೇಕು ಪೋತ್ಸಾಹ ನೀಡುವ ಕ್ರಮಗಳು ಹೆಚ್ಚಾಗಬೇಕು ಸೌಹಾರ್ದ ಸಹಕಾರಿ ಕಾಯ್ದೆ ಕ್ಷೇತ್ರದ ಅಭಿವದ್ಧಿಗೆ ಪೂರಕವಾಗಿರಬೇಕುವೆಂದು ತಿಳಿಸಿದರು. ಮತ್ತು ಸೌಹಾರ್ದ ಸಹಕಾರಿ ಕೇತ್ರದಲ್ಲಿ ಅಪೆಕ್ಸ್ ಬ್ಯಾಂಕಿನ ಸ್ಥಾಪನೆಯಾಗಬೇಕೆಂದು ತಿಳಿಸಿದರು.

ಈ ಎಲ್ಲಾ ಶಾಸಕರುಗಳಿಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ವತಿಯಿಂದ ಶಾಲುಹೊದಿಸಿ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.




ವಿಧಾನ ಪರಿಷತ್ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠ ಇವರುಗಳನ್ನ ಸ್ವಾಗತಿಸಿದರು. ಪ್ರಾಸ್ತವಿಕವಾಗಿ ಮಾತನಾಡುತ್ತ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಾರಂಭ ಹಾಗು ನಂತರದ ಬೆಳವಣಿಗೆಗಳು ಮತ್ತು ಇದುವರೆಗಿನ ಪ್ರಗತಿಯ

ವಿವರಗಳಿಗೆ ಸಚಿವರುಗಳ ಗಮನವನ್ನ ಸೆಳೆದರು ಮುಂದುವರೆದು ಮಾಡನಾಡುತ್ತ ಸೌಹಾರ್ದ ಸಹಕಾರ ಕ್ಷೇತ್ರ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ ಧ್ಯೇಯದೊಂದಿಗೆ ಕಾರ್ಯನಿರ್ವಹಿಸುತ್ತೀದೆ. 2001ರಲ್ಲಿ ಜಾರಿಗೆ ಬಂದ ಸೌಹಾರ್ದ ಸಹಕಾರಿ ಕಾಯ್ದೆಗೆ ಅನೇಕ ತಿದ್ದುಪಡಿಗಳನ್ನು ಮಾಡಿ ಸಹಕಾರಿಗಳ ಸ್ವಾಯತ್ತತೆಯನ್ನ ಕಡಿಮೆ ಮಾಡುತ್ತಿದೆ ಇದರಿಂದಾಗಿ ಸರ್ಕಾರದ ಸಹಕಾರಿ ಇಲಾಖೆಯ ಹಸ್ತಕ್ಷೇಪಕ್ಕೆ ಅವಕಾಶವಾಗಿ ಸಾಕಷ್ಟು ಆಡಳಿತತ್ಮಾತಕ ತೊಂದರೆಗಳು ಉಂಟಾಗುತ್ತಿವೆ ಇವುಗಳ ನಿವಾರಣೆಗೆ 2001ರಲ್ಲಿ ಪ್ರಾರಂಭವಾದ ಮೂಲ ಸೌಹಾರ್ದ ಸಹಕಾರಿಯ ಅಶಯಕ್ಕೆ ಅನುಗುಣವಾಗಿ ಕಾಯ್ದೆಗೆ ತಿದ್ದುಪಡಿ ಮಾಡಿ ಕ್ಷೇತ್ರದ ಬೆಳವಣಿಗೆ ಸಹಕರಿಸಬೇಕೆಂದು ಕೋರಿದರು ಹಾಗೂ ಮನವಿ ಪತ್ರವನ್ನ ಸಲ್ಲಿಸಿದರು.

## ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದಲ್ಲಿ ರಾಜ್ಯದ 2017-18ನೇ ಸಾಲಿನ ಶ್ರೇಷ್ಠ ಸಹಕಾರಿಗಳ ಹಾಗೂ ಉತ್ತಮ ಸೌಹಾರ್ದ ಸಹಕಾರಿಗಳ ಪ್ರಶಸ್ತಿ ಸಮಾರಂಭ



ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದಲ್ಲಿ ರಾಜ್ಯದ ಶ್ರೇಷ್ಠ ಸಹಕಾರಿಗಳೆಂದು ಶ್ರೀ ಪ್ರಮೋದ ವಿಘ್ನೇಶ್ವರ ಹೆಗಡೆ, ಅಧ್ಯಕ್ಷರು, ಯು.ಕೆ. ಸೌಹಾರ್ದ ಪತ್ತಿನ ಸಹಕಾರಿ ನಿ., ಯಲ್ಲಾಪುರ, ಉತ್ತರ ಕನ್ನಡ, ಶ್ರೀ ಹೆಚ್. ಗಣೇಶ್ ಕಾಮತ್, ಅಧ್ಯಕ್ಷರು, ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ., ಕುಂದಾಪುರ, ಉಡುಪಿ. ಶ್ರೀ ರಾಮಣ್ಣ ಹುಕ್ಕೇರಿ, ನಿರ್ದೇಶಕರು, ಶ್ರೀ ಭಾಗ್ಯಲಕ್ಷ್ಮಿ ಪತ್ತಿನ ಸೌಹಾರ್ದಸಹಕಾರಿ ನಿ., ಗೋಕಾಕ್, ಬೆಳಗಾವಿ. ಶ್ರೀ ಹೆಚ್. ಎಸ್. ಮಂಜಪ್ಪ, ನಿರ್ದೇಶಕರು, ಶಿವಮೊಗ್ಗ ಜಿಲ್ಲಾ ಕೇಂದ್ರ ಗ್ರಾಹಕರ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ.ಶ್ರೀ ಶಿವಬಸಪ್ಪಾ ಚನಮಲ್ಲೆ, ಸ್ನೇಹಾ ಪತ್ತಿನ ಸೌಹಾರ್ದ ಸಹಕಾರಿ ನಿ. ಬಸವಕಲ್ಯಾಣ, ಬೀದರ. ಇವರುಗಳನ್ನು ಸನ್ಮಾನಿಸಲಾಯಿತು.

ರಾಜ್ಯದ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳೆಂದು ಇವುಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಕರನ್ನ ಸನ್ಮಾನಿಸಲಾಯಿತು. ಶ್ರೀ ವೀರುಪಾಕ್ಷೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನ್ವಿ, ರಾಯಚೂರು. ಡಾ. ಪ್ರಭಾಕರ ಕೋರೆ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಬೆಳಗಾವಿ. ಶ್ರೀ ಗುರುಕುಲ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ತುಮಕೂರು. ಶ್ರೀ ಲಲಿತಾಂಬಾ ಪತ್ತಿನ ಸೌಹಾರ್ದ ಸಹಕಾರಿ ನಿ., ಗದಗ. ಮಾತೃಭೂಮಿ ಸೌಹಾರ್ದ ಸಹಕಾರಿ ನಿ., ಮಂಗಳೂರು, ದಕ್ಷಿಣ ಕನ್ನಡ.









# ಅರ್ಥಪೂರ್ಣವಾಗಿ ಜರುಗಿದ 17ನೇ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳು

17ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ನಾಡಗೀತೆಯೊಂದಿಗೆ ಪ್ರಾರಂಭಿಸಲಾಯಿತು. ನಂತರ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಸಾಮಾನ್ಯ ಸಭೆಗೆ ಆಗಮಿಸಿದ ಎಲ್ಲಾ ಪ್ರತಿನಿಧಿಗಳನ್ನ ಸಹಕಾರಿಗಳನ್ನ ಸ್ವಾಗತಿಸಿ, ಸಂಯುಕ್ತ ಸಹಕಾರಿಯ ಅಧ್ಯಕ್ಷರಾಧಿಯಾಗಿ ಎಲ್ಲಾ ನಿರ್ದೇಶಕರುಗಳನ್ನ ಸಭೆಗೆ ಪರಿಚಯಿಸಿದರು.

ನಂತರದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮತ್ತೋಮ್ಮೆ ಎಲ್ಲಾ ಪ್ರತಿನಿಧಿಗಳನ್ನ ಸ್ವಾಗತಿಸಿ ಅಧ್ಯಕ್ಷ ಭಾಷಣವನ್ನ ಪ್ರಾರಂಭಿಸಿದರು. ಕಳೆದ ವರ್ಷ 16ನೇ ವಾರ್ಷಿಕ ಸಾಮಾನ್ಯ ಸಭೆಯವರು ಅನುಮೊದಿಸಿದ ಕ್ರಿಯಾಯೋಜನೆಯಂತೆ ಸಂಯುಕ್ತ ಸಹಕಾರಿಯ ನಡೆ ಸೌಹಾರ್ದ ಸಹಕಾರಿಗಳ ಕಡೆಗೆವೆಂಬ ಧ್ಯೇಯ ವಾಕ್ಯದೊಂದಿಗೆ ಸಂಯುಕ್ತ ಸಹಕಾರಿ ಆಡಳಿತ ಮಂಡಳಿಯವರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ. 2017–18 ಸಾಧನೆಗಳ ಪರ್ವಎನಿಸಿದೆ ಸಂಯುಕ್ತ ಸಹಕಾರಿಯ ಆಡಳಿತ ವಿಕೇಂದ್ರೀಕರಣ ಗೊಡಿದೆ. ಜಿಲ್ಲಾ ಸಂಪರ್ಕ ಕಛೇರಿಗಳ ಪ್ರಾರಂಭಿಸಲಾಯಿತು.

ಜಿಲ್ಲಾ ಒಕ್ಕೂಟಗಳ ರಚನೆಗೆ ಕ್ರಮವಿಡಲಾಗುತ್ತೀದೆ. ಸಂಯುಕ್ತ ಸಹಕಾರಿ ಉಪವಿಧಿಗಳ ತಿದ್ದುಪಡಿ ಅನುಮೋದನೆಯಾಗಿ ಪ್ರಾಂತೀಯ ನಿರ್ದೇಶಕರ ಸಮಿತಿ ರಚನೆಗೆ ಅವಕಾಶವಾಗಿದೆ. ನ್ಯಾಯಾಲಯ ಸಂಚಾರಿ ಪೀಠ ಬೆಳಗಾವಿ ಹಾಗೂ ಬೆಂಗಳೂರು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ದಾವಾ ಪಂಚಾಯಿತಿ ನ್ಯಾಯಾಲಯಕ್ಕೆ ಪೂರ್ಣ ಪ್ರಮಾಣದ ಪೀಠಧಿಕಾರಿಯನ್ನ ಸರ್ಕಾರದವರು ನೇಮಿಸಿದ್ದಾರೆ.

ಸೌಹಾರ್ದ ಸಹಕಾರಿಗಳಿಗೆ ಅವರ ಆಯ್ಕೆಗೆ ಅವಕಾಶವಾಗುವಂತೆ 7 ಕಾಮನ್ ಸ್ವಾಫೇವೇರ್ ಕಂಪನಿಗಳನ್ನ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಅನುಮೊದಿಸಿದ್ದಾರೆ. ರಾಜ್ಯದಾದಂತ್ಯ ವಿವಿಧ ರೀತಿಯ ವಿಷಾಯಾದಾರಿತ ತರಬೇತಿ ಕಾರ್ಯಕ್ರಮಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ.

ಸಿಬ್ಬಂದಿಗಳಿಗೆ ಪದೋನ್ನತಿ, ನೂತನ ಸಿಬ್ಬಂದಿ ನೇಮಕಾತಿ ಮಾಡಲಾಗಿದೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ವೇಗ ನೀಡಲಾಗಿದೆ. ಇ–ಸ್ಟಾಂಪಿಂಗ್ ಕೇಂದ್ರಗಳ ನಿರ್ವಹಣೆಗೆ ಸರಳೀಕೃತವಾಗಿಸಿದೆ. ಕಮಿಷನ್ ಹೆಚಿಸುವಂತೆ ಸ್ಟಾಕ್



ಹೊಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಅವರ ಜೊತೆ ವ್ಯವರಿಸಲಾಗಿದೆ. ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರ ಮಟ್ಟದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ, ಅಧ್ಯಯನಗಳು ನಡೆಯುತ್ತೀವೆ ಮೈಸೂರು ವಿಶ್ವವಿದ್ಯಾಲಯದವರಿಂದ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಅಧ್ಯಯನವು ಕೂಡ ನಡೆದಿದೆ.

ಸೌಹಾರ್ದ ಸಹಕಾರಿಗಳಿಗೆ ಅನೇಕ ಪ್ರಕಟಣೆಗಳನ್ನ ವಿವಿಧ ರೀತಿಯ ಕೈಪಿಡಿಗಳನ್ನ ಸಿದ್ದಪಡಿಸಲಾಗಿದೆ ಉತ್ತಮ ಸಂಪನ್ಮೂಲ ವ್ಯಕ್ತಿಗಳ ಹಾಗೂ ತರಬೇತಿದಾರರ ಪಡೆಯನ್ನ ಸಿದ್ದಪಡಿಸಲಾಗಿದೆ. ಸೌಹಾರ್ದ ಸಹಕಾರಿಗಳು ಅನುಭವಿಸುತ್ತಿರುವ ಆದಾಯ ತೆರಿಗೆ ತೊಂದರೆ ನಿವಾರಣೆಗಾಗಿ ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿ, ರಾಜ್ಯ ಸಚಿವರಾದ ಶ್ರೀ ಶಿವಪ್ರಸಾದ ಶುಕ್ಲಾ, ಕೌಶಲ್ಯಾಭಿವೃದ್ಧಿ ಸಚಿವರಾದ ಶ್ರೀ ಅನಂತಕುಮಾರ ಹೆಗಡೆ ಇವರನ್ನು ಭೇಟಿ ಮಾಡಿ ವಿವರಣೆ ನೀಡಿ ಮನವಿ ಸಲ್ಲಿಸಲಾಗಿದೆ. ಕರ್ನಾಟಕ ಹಾಗೂ ಗೋವಾ ರಾಜ್ಯಗಳ ಆದಾಯ ತೆರಿಗೆ ಪ್ರಧಾನ ಆಯಕ್ತರಾದ ಶ್ರೀ ರಜನೀಶರವರನ್ನು ಭೇಟಿ ಮಾಡಿ ವಿವರಣೆ ನಿಡಲಾಗಿದೆ ಹಾಗೂ ಅನೇಕ ಗಣ್ಯರನ್ನ ಭೇಟಿಮಾಡಿ ಸೌಹಾರ್ದ

ಸಹಕಾರಿಗೆ ಕ್ಷೇತ್ರದ ಅಭಿವೃದ್ಧಿಗೆ ಪ್ರೋತ್ಸಾಯಿಸಲು ಕೋರಿದೆವೆಂದು ತಿಳಿಸಿದರು. ಇತ್ತೀಚೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ವಿಭಾಗದ ಸಮಾಲೋಚನಾ ಹಾಗೂ ಸಂಪರ್ಕ ಸಭೆಗಳ ನಡೆಸಲಾಗಿದೆ. ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ಕಟ್ಟಡಕ್ಕೆ ಹಾಗೂ ಬೆಳಗಾವಿ, ಮೈಸೂರು, ಕಲಬುರಗಿ ವಿಭಾಗೀಯ ಕಟ್ಟಡಗಳಿಗೆ ಸೌಹಾರ್ದ ಸಹಕಾರಿಗಳ ಹಣಕಾಸಿನ ನೆರವುನೀಡುವ ವಿಷಯದಲ್ಲಿ ಒಮ್ಮತದಿಂದ ಒಪ್ಪಿಗೆ ನೀಡಿರುವುದಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಧನ್ಯವಾದವನ್ನ ಸಲ್ಲಿಸುತ್ತೇನೆ.

ಎಲ್ಲವೂ ಸೌಹಾರ್ದ ಸಹಕಾರಿಗಳ ಹೆಮ್ಮೆ ಪಡುವ ರೀತಿಯಲ್ಲಿ ಮುನ್ನಡೆಯುತ್ತೀರುವುದು ಸಂತೋಷದ ವಿಷಯ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಹೊಸದಾಗಿ ಯಾವುದೇ ರೀತಿಯ ಸದಸ್ಯರಿಗೆ ಮೊಸವಾಗದಂತೆ ಹಾಗೂ ಅವವ್ಯಹಾರಗಳನ್ನು ತಡೆಯುವಂತೆ ಕಟ್ಟುನಿಟ್ಟಣ ಕ್ರಮವಿಡಲಾಗಿದೆ. ಪ್ರಸ್ತ ಸಾಲಿನಲ್ಲಿ ಯಾವುದೇ ಹೊಸ ಪ್ರಕರಣಗಳು ದಾಖಲಾಗಿರುವುದಿಲ್ಲ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ರಾಜ್ಯದ ಜನರ ಸಹಕಾರಿ ಇಲಾಖೆಯ ಹಾಗೂ ಸಹಕಾರಿಗಳ ಗಮನವನ್ನ ಸೆಳೆದಿದೆ. ಮೆಚ್ಚುಗೆಯನ್ನ ಪಡೆದಿದೆ.

ಮುಂಬರುವ ದಿನಗಳಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಬಡ್ಡಿಯೇತರ ಆದಾಯವನ್ನ ಹೆಚಿಸುವಂತಹ ಕೇಂದ್ರದ ಜನೌಷಧಿ ಯೋಜನೆ ಇಫ್ಕೊ ಸಂಸ್ಥೆಯ ಮೂಲಕ ರಸಗೊಬ್ಬರ ಮಾರಾಟ ಕೇಂದ್ರಗಳನ್ನ ಪ್ರಾರಂಭಿಸುವ ಮೂಲಕ ಹಾಗೂ ರಾಜ್ಯದ ಹಾಗೂ ಇನ್ನೂ ಅನೇಕ ಯೋಜನೆಗಳನ್ನ ಪ್ರಾರಂಭಿಸಿ ಸೌಹಾರ್ದ ಸಹಕಾರಿಗಲ ಆರ್ಥಿಕ ಗುಣಮಟ್ಟವನ್ನ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ವಿಡಲಾಗುತ್ತಿದೆ ಎಂದು ತಿಳಿಸಿದರು.

### ಸಹಕಾರ ಮತ್ತು ಬ್ಯಾಂಕಿಂಗ್ ಡಿಪ್ಲೊಮಾ – ದೂರ ಶಿಕ್ಷಣ
### Diploma in cooperation & Banking ( DCB ) Distance Education

ಸಂಯುಕ್ತ ಸಹಕಾರಿಯು ಪಸ್ತುತ ನಡೆಸುತ್ತಿರುವ ವೈವಿಧ್ಯಮಯ ತರಬೇತಿ ಕಾರ್ಯಕ್ರಮಗಳ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಹಲವು ದಿನಗಳ ಬೇಡಿಕೆಯಾಗಿರುವ ಹಾಗೂ ಕಳೆದ ವರ್ಷದಲ್ಲಿ ಸಾಮಾನ್ಯ ಸಭೆಯಲ್ಲಿ ಅನುಮೋದಿತವಾಗಿರುವ ಕ್ರೀಯಾಯೋಜನೆಯಂತೆ ಸಹಕಾರ ಮತ್ತು ಬ್ಯಾಂಕಿಂಗ ಡಿಪ್ಲೊಮಾ – ದೂರ ಶಿಕ್ಷಣ Diploma in cooperation & Banking (DCB) Distance Education 26 ವಾರಗಳ ತರಬೇತಿಯನ್ನು ಪ್ರಾರಂಭಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ತೀರ್ಮಾನಿಸಿದೆ. ವರ್ಷದಲ್ಲಿ 2 ಬಾರಿ ಈ ಕೋಸಗಳನ್ನು ನಡೆಸಲಾಗುತ್ತಿದೆ. 3 ತಿಂಗಳುಗಳ 2 ಸೆಮಿಸ್ಟರ ನಡೆಸಲಾಗುತ್ತದೆ. ಎರಡು ಸೆಮಿಸ್ಟರನಲ್ಲು 5 ದಿನಗಳ ಕಂಟ್ಯಾಕ್ಟ ತರಬೇತಿಗಳನ್ನು ಪ್ರಾಯೋಗೀಕ ಅಧ್ಯಯನ ವ್ಯವಸ್ಥೆಗಳನ್ನು ಮಾಡಿದ ನಂತರ ಪ್ರಾಜೆಕ್ಟ ರಿಪೋರ್ಟಗಳನ್ನು ಸಿದ್ಧಪಡಿಸಲು ವ್ಯವಸ್ಥೆಮಾಡಿ ನಂತರ ಪರೀಕ್ಷಗಳನ್ನು ನಡೆಸಲಾಗುವುದು. ಕೊನೆಯಲ್ಲಿ ಸರ್ಟಿಫಿಕೇಟ್ ನೀಡಲಾಗುತ್ತದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ನೌಕರ ವರ್ಗದವರು ಸಂಯುಕ್ತ ಸಹಕಾರಿಯ ನೌಕರ ವರ್ಗದವರು ಹಾಗೂ ಎಸ್.ಎಸ್.ಎಲ್.ಸಿ., ಪಿ.ಯು.ಸಿ ಓದಿರುವ ಸಾಮಾನ್ಯ ಯುವಕರು ಇದರ ಪ್ರಯೋಜನವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಬೆಳವಣಿಗೆಯಲ್ಲಿ ನಿರಂತರವಾಗಿ ಸಹಕಾರವನ್ನು ನಿಡುತ್ತ ಬಂದಿರುವ ಎಲ್ಲಾ ಕೃತಜ್ಞತೆಯನ್ನ ಸಲ್ಲಿಸಿ ನಿಮ್ಮ ಸಹಕಾರವೇ ನಮಗೆ ಸ್ಪೂರ್ತಿವೆಂದು ಭಾಷಣವನ್ನ ತಮ್ಮ ಮುಕ್ತಾಯ ಮಾಡಿದರು.



17ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ.

ನಂತರದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲರವರು 17ನೇ ಸಾಮಾನ್ಯ ಸಭೆಯ ವಿಷಯಗಳನ್ನು ಮಂಡಿಸುತ್ತ ಮುಂದುವರೆದರು. ಸಾಮಾನ್ಯ ಸಭೆಯ ಪ್ರತಿನಿಧಿಗಳು ಎಲ್ಲಾ ವಿಷಯಗಳನ್ನು ಸಕ್ರಿಯವಾಗಿ ಭಾಗವಹಿಸಿ ತಮ್ಮ ಸಲಹೆ ಹಾಗೂ ಮಾರ್ಗದರ್ಶನಗಳನ್ನ ನೀಡುತ್ತ ಪರಿಣಾಮಕಾರಿಯಾಗಿ ಚರ್ಚೆಯಲ್ಲಿ ಭಾಗವಹಿಸಿ ವಿಷಯಗಳಿಗೆ ಅನುಮೊದನೆ ನೀಡಿದರು.









**ವಂದನಾರ್ಪಣೆ** :

ಸಂಯುಕ್ತ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆಯ ವಂದನಾರ್ಪಣೆಯನ್ನ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ನಂಜನಗೌಡರವರು ನೆರವೇರಿಸಿದರು.





ಸಹಕಾರಿ ಪ್ರತಿನಿಧಿಗಳಿಗೆ ಆಯೋಜಿಸಿದ್ದ ಭೋಜನ ವ್ಯವಸ್ಥೆ



## 17ನೇ ವಾರ್ಷಿಕ ಸಾಮಾನ್ಯ ಸಭೆಯ ನಂತರದ ಕಾರ್ಯಕ್ರಮಗಳ ವಿವರಗಳು

1. ಇಫ್ಕೋ ರಸಗೊಬ್ಬರ ಸಂಸ್ಥೆಯ ಮಾರಾಟ ಮಳಿಗೆ ಪ್ರಾರಂಭಿಸುವ ಕುರಿತು.
2. ಜನೌಷಧಿ ಕೇಂದ್ರಗಳನ್ನು ಪ್ರಾರಂಭಿಸುವ ಕುರಿತು
3. ಸಿ–ಎಡ್ಜ್ ಟೆಕ್ನೊಲಜಿ ಲಿ., ಥಾನೆ
4. ವೋವರ್‌ಡ್ರೈವ್ ಇನೊಫೊಟೆಕ್ ಪ್ರೈವೈಟ್ ಲಿ., ಬೆಂಗಳೂರು
5. ನೈವಿ ಪ್ಲಸ್ ಸಾಪ್ಟೇವೇರ್ ಸಲೂಷನ್ ಆಲ್‌ಪೂಜಾ ಪ್ರೈವೈಟ್ ಲಿ.,
6. ವಿ–ಸಾಪ್ಟ್ ಟೆಕ್ನೊಲಜಿ ಪ್ರೈವೈಟ್ ಲಿ., ಹೈದರಾಬಾದ್
7. ಫಾರ್‌ಚೂನ್ ಇನ್ ಪೂ ಸರ್ವಿಸ್ ಇಂಡಿಯಾ ಪ್ರೈವೆಟ್ ಲಿ., ಬೆಳಗಾವಿ.
8. ಸಿದ್‌ಸಾಪ್ಟ್ ಟೆಕ್ನೋಲಜಿ ಪ್ರೈವೈಟ್ ಲಿ., ಬೆಂಗಳೂರು
9. ಮೆಗಾಸಾಪ್ಟ್ ಇನ್‌ಪಾರಮೇಷನ್ ಸಿಸ್ಟಮ್ ಪ್ರೈವೈಟ್ ಲಿ., ಮುಂಬೈ
10. ಎಸ್.ಬಿ.ಐ. ಫೈನಾನ್ಸ್ ಇನ್ಸೂರೆನ್ಸ್ ಇಂಡಿಯಾ
11. ಎಸ್.ಬಿ.ಐ. ಫೈನಾನ್ಸ್ ಸರ್ವಿಸ್ ಇಂಡಿಯಾ
12. ಭಾರ್ತಿ ಎಕ್ಸಾ ಜನರೇಲ್ ಇನ್ಸೂರೆನ್ಸ್
13. ಟ್ರುಫನ್ ಕ್ರೆಡಿಟ್ ಸರ್ವಿಸ್

ಇವರುಗಳು ತಮ್ಮ ಕಂಪನಿಯಿಂದ ತಯಾರಿಸಲಾದ ಸ್ವಾಪೇವೇರ್‌ಗಳ ವಿವರಗಳನ್ನು ನೀಡಿದರು

ಇಫ್ಕೋ ರಾಜ್ಯ ಮಾರ್‌ಕೇಟಿಂಗ್ ಆಫೀಸರ್ ಸಿ.ಎಸ್ ಪಾಟೀಲ ಇಫ್ಕೋ ಕಂಪನಿಯ ಮೂಲಕ ಸೌಹಾರ್ದ ಸಹಕಾರಿಗಳು ಮಳಿಗೆ ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಪಾಟೀಲ ಜನೌಷಧಿ ಕೇಂದ್ರಗಳ ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡಿದರು.

# 3 ದಿನಗಳ ಅಲ್ಪಾವಧಿ ತರಬೇತಿಗಳು



**ಬೆಂಗಳೂರು :** ಬೆಂಗಳೂರು ಪ್ರಾಂತದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ಮೂರು ದಿನಗಳ ವಿಷಯಾಧಾರಿತ ವಿಶೇಷ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 06–08–2018ರಿಂದ 08–08–2018ರವರೆಗೆ ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿರವರು, ಮುಖ್ಯ ಅತಿಥಿಗಳಾಗಿ ಸಹಕಾರಿಗಳ ಉಪನಿಬಂಧಕರು, 2ನೇ ವಲಯ ಬೆಂಗಳೂರು ಶ್ರೀ ಪಿ ಶಶಿಧರ್‌ರವರು ಮತ್ತು ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿರವರು ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್‌ರವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿರವರು ಹಾಗೂ ವೇದಿಕೆ ಮೇಲಿದ್ದ ಇತರೆ ಗಣ್ಯರು ದೀಪ ಬೆಳಗಿಸುವ ಮೂಲಕ ನೆರವೇರಿಸಿದರು. ಪಿ.ಶಶಿಧರ್‌ರವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ತರಬೇತಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದ ಅಧ್ಯಕ್ಷೀಯ ಭಾಷಣ ಮಾಡಿದಂತಹ ಶ್ರೀ ಬಿ.ಎಸ್.ಗುಂಡುರಾವ್‌ರವರು ಯಾವುದೇ ಸಂಸ್ಥೆ ಅಭಿವೃದ್ಧಿ ಹೊಂದಬೇಕಾದರೆ ಅದರ ಸಿಬ್ಬಂದಿಗಳು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಹಾಗೂ ಕೌಶಲ್ಯಭರಿತವಾಗಿ ಕೆಲಸ ಮಾಡಬೇಕು ಆಗ ಮಾತ್ರ ಸಂಸ್ಥೆಗಳು ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಹೇಳಿದರು. ಪ್ರಾಸ್ತಾವಿಕ ಭಾಷಣವನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ನಾರಾಯಣ ಹೆಗಡೆಯವರು ಮಾಡಿದರು, ವಂದನಾರ್ಪಣೆಯನ್ನು ಬೆಂಗಳೂರು ಪ್ರಾಂತೀಯ ಕಾನೂನು ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನಡೆಸಿಕೊಟ್ಟರು.

---

**ಕಲಬುರಗಿ:** ದಿನಾಂಕ : 09–08–2018 ರ ಗುರುವಾರ ಸಮಯ 10:30 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಪ್ರಾಂತೀಯ ಕಛೇರಿ ಕಲಬುರ್ಗಿ ವತಿಯಿಂದ ಕಲಬುರ್ಗಿ, ಬೀದರ ಮತ್ತು ಯಾದಗೀರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ "ಮೂರು ದಿನಗಳ ವಿಷಯಾಧಾರಿತ ತರಬೇತಿ" ಕಾರ್ಯಗಾರವನ್ನು ಮೈರಾಡ ಸಿಐಡಿಆರ್ ಕಲಬುರ್ಗಿ, ಪ್ರಕೃತಿ ಜ್ಞಾನ ತರಬೇತಿ ಕೇಂದ್ರ ರಾಜನಾಳ ರಸ್ತೆ, ಕಮಲಾಪೂರ ತಾ. ಕಲಬುರ್ಗಿ ಜಿ. ಕಲಬುರ್ಗಿ ಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿ ಕಾರ್ಯಗಾರದ ಉದ್ಘಾಟನೆಯನ್ನು ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಕಲಬುರ್ಗಿ ಪ್ರಾಂತ್ಯ, ರಾಯಚೂರ ಶ್ರೀ ಐ.ಎಸ್.ಗಿರಡ್ಡಿ ಇವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಸಂಯುಕ್ತ ಸಹಕಾರಿಯು ತನ್ನ ಸದಸ್ಯ ಸಹಕಾರಿಗಳಿಗೆ ಉತ್ತಮ ತರಬೇತಿ ನೀಡುವ ಮೂಲಕ ಇತರ ಒಕ್ಕೂಟಗಳಿಗೆ ಮಾದರಿಯಾಗಿದೆ ಇಂತಹ ತರಬೇತಿ ಕಾರ್ಯಗಾರವನ್ನು ಉದ್ಘಾಟಿಸುತ್ತಿರುವುದು ನನಗೆ ಹೆಮ್ಮೆ ಅನಿಸುತ್ತಿದೆ ಎಂದು ನುಡಿದರು.

ಈ ತರಬೇತಿಯಲ್ಲಿ ಭಾಗವಹಿಸಿದ ಸಿಬ್ಬಂದಿಗಳು ಉತ್ತಮ ತರಬೇತಿ ಪಡೆದು ತವು ಕಾರ್ಯನಿರ್ವಹಿಸುವ ಸಹಕಾರಿಗಳನ್ನು ಗುಣಮಟ್ಟದಲ್ಲಿ ಕಾರ್ಯನಿರ್ವಹಿಸುವಂತೆ ಮಾಡುವ ಜವಾಬ್ದಾರಿ ನಿಮ್ಮದಾಗಿದೆ ಎಂದರು. ಸಹಕಾರಿಗಳು ಆರ್ಥಿಕ ಮತ್ತು ಸಾಮಾಜಿಕವಾಗಿ ಬೆಳೆದಾಗ ಸಹಕಾರಿಯ ಮೂಲ ಉದ್ದೇಶ ಇಡೆರುತ್ತದೆ ಹಾಗೂ ಸೌಹಾರ್ದ ಕಾಯ್ದೆ ಜಾರಿಯಾದ ನಂತರ ಅತಿ ಹೆಚ್ಚಿನ ಸೌಹಾರ್ದ ಸಹಕಾರಿಗಳು ನೋಂದಣಿ ಯಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಹಾಗೂ ಸ್ವತಂತ್ರ್ಯ ಹೆಚ್ಚಿನದಾಗಿರುವುದರಿಂದ ಅವರ ಜವಾಬ್ದಾರಿಯು ಹೆಚ್ಚಿನದಾಗಿರುತ್ತದೆ. ಸಂಯುಕ್ತ ಸಹಕಾರಿಯು ಕಾಲ ಕಾಲಕ್ಕೆ ತರಬೇತಿ ನೀಡುವ ಮೂಲಕ ಅವರಿಗೆ ಕಾಯ್ದೆಯ/ನಿಯಮಗಳ ಹಾಗೂ ಉಪವಿಧಿಯಲ್ಲಿನ ಅಂಶಗಳನ್ನು ತಿಳಿಸಿ ಅವುಗಳ ಏಳಿಗೆಗೆ ಶ್ರಮಿಸುತ್ತಿದೆ ತರಬೇತಿಯ ಸದುಪಯೋಗ ಪಡೆದುಕೊಳ್ಳಲು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಯುತ ಗುರುನಾಥ ಜಾಂತಿಕರ ಮಾತನಾಡಿ ಸಂಯುಕ್ತ ಸಹಕಾರಿ ತರಬೆತಿಯಲ್ಲಿ ಮುಂಚುಣಿಯಲ್ಲಿದೆ ಸದಸ್ಯ ಸಹಕಾರಿ ಬೇಡಿಕೆಗೆ ತಕ್ಕ ಆಯಾ ವಿಷಯಗಳನ್ನು ಸದಸ್ಯ ಸಹಕಾರಿಗೆ



ನೀಡುತ್ತಿದೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಹಾಗೂ ತರಬೇತಿ ಪಡೆದ ನಂತರ ತಮ್ಮ ಸಹಕಾರಿಯಲ್ಲಿ ಅಳವಡಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಅದರ ಮೂಲಕ ಸೌಹಾರ್ದ ಸಹಕಾರಿಗಳ ಗುಣಮಟ್ಟ ಹೆಚ್ಚಾಗಬೇಕು ಎಂದರು. ಆಡಳಿತ ಮಂಡಳಿಯ ಗುರಿ ತಲುಪಲು ಹಾಗೂ ಅತಿ ಹೆಚ್ಚಿನ ವ್ಯವಹಾರ ಕೈಗೊಂಡು ಲಾಭದತ್ತ ಸಹಕಾರಿ ತರಲು ಇಂಥಹ ತರಬೇತಿ ಸದುಪಯೋಗ ಪಡೆದುಕೊಳ್ಳಲು ಕರೆ ನೀಡಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿ ಸ್ಥಾನವನ್ನು ವಹಿಸಿಕೊಂಡಿರುವ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಅವರು ಮಾತನಾಡಿ ಸದಸ್ಯ ಸಹಕಾರಿಯು ತರಬೇತಿ ಬೇಡಿಕೆ



ಭಾಗವಹಿಸಿದ ಶಿಭಿರಾರ್ಥಿಗಳು

ಸಲ್ಲಿಸಿದಾಗ ಅಂತಹ ವಿಷಯಗಳ ಕುರಿತು ಸ್ಥಳಿಯವಾಗಿ ತರಬೇತಿಯನ್ನು ಆಯೋಜಿಸಲಾಗುವುದು ತಾವು ಇಂತಹ ತರಬೇತಿಯ ಪ್ರಯೋಜನ ಪಡೆದುಕೊಳ್ಳಬೇಕು ಹಾಗೂ ತಮ್ಮ ಆಡಳಿತ ಮಂಡಳಿಗೆ ಮಾರ್ಗದರ್ಶನ ನೀಡಬೇಕು ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಾಯ್.ಟಿ. ಪಾಟೀಲ್ ಅವರು ಮಾತನಾಡಿ ತರಬೇತಿ ಸಿಬ್ಬಂದಿಗಳಿಗೆ ಅತ್ಯಂತ ಅವಶ್ಯಕ 10 ದಿನಗಳಲ್ಲಿ ಸಿಗುವ ಮಾಹಿತಿ ಈ ಮೂರು ದಿನಗಳಲ್ಲಿ ಸಂಯುಕ್ತ ಸಹಕಾರಿಯು ನೀಡಲು ಪ್ರಯತ್ನಿಸುತ್ತಿದೆ ಇದರ ಲಾಭ ಪಡೆಯಲು ತಿಳಿಸಿದರು.

**ಗದಗ :** 2018–19ನೇ ವರ್ಷದ ತರಬೇತಿ ಕಾರ್ಯಕ್ರಮಗಳಲ್ಲಿ ಅಗಸ್ಟ್ ಮಾಹೇಯಲ್ಲಿ 3 ದಿನಗಳ ವಿಷಯಾದಾರಿತ ವಿಶೇಷ ತರಬೇತಿಯನ್ನು ಆಯೋಜಿಸಿ ನಮಗೆ ಅದನ್ನು ಜರುಗಿಸಲು ತಿಳಿಸಿದ ಅನ್ವಯ ನಮ್ಮ ಬೆಳಗಾವಿ ಪ್ರಾಂತ್ಯದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ/ಆಡಳಿತ ಮಂಡಳಿ ಸದಸ್ಯರಿಗೆ 3 ದಿನಗಳ ವಿಷಯಾಧಾರಿತ ವಿಶೇಷ ತರಬೇತಿಯನ್ನು ದಿನಾಂಕ : 29,30ಮತ್ತು 31 ಅಗಸ್ಟ್ 2018 ರಂದು ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ॥ ಜಿಲ್ಲೆ ಇಲಿ ಆಯೋಜಿಸಲಾಗಿತ್ತು. ಸದರಿ ಸಭೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಸಂಯುಕ್ತ ಸಹಕಾರಿಯ ಧಾರವಾಡ ಜಿಲ್ಲೆಯ ನಿರ್ದೇಶಕರಾದ ಶ್ರೀ ಚಂದ್ರಕಾಮತ ಪಡಚ್ಚಿನವರ ಸಂಯುಕ್ತ ಸಹಕಾರಿಯ ಗದಗ ಜಿಲ್ಲೆಯ ನಿರ್ದೇಶಕರಾದ ಶ್ರೀ ಆರ್. ಎನ್. ದೇಶಪಾಂಡೆ ಮತ್ತು ಕೆ.ಡಿ.ಸಿ.ಸಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಶ್ರೀಮತಿ ಎಸ್.ಬಿ.ಹೀರೆಮಠ ಸಹಕಾರಿಗಳ ಉಪನಿಭಂಧಕರು. ಗದಗ ಜಿಲ್ಲೆ ಇವರುಗಳನ್ನು ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಸಭೆಯಲ್ಲಿ 42 ಸೌಹಾರ್ದ ಸಹಕಾರಿಗಳಿಂದ 46 ಅಭ್ಯರ್ಥಿಗಳು ಹಾಜರಿದ್ದರು.



ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತಾನಾಡಿದ ಸಂಯುಕ್ತ ಸಹಕಾರಿಯ ಗದಗ ಜಿಲ್ಲೆಯ ನಿರ್ದೇಶಕರಾದ ಶ್ರೀ ಆರ್, ಎನ್ ದೇಶಪಾಂಡೆ ರವರು ಸಂಯುಕ್ತ ಸಹಕಾರಿಯು ಕಳೆದ 15 ವರ್ಷಗಳಿಂದ 10 ದಿನಗಳ ತರಬೇತಿಯನ್ನು ಅಯೋಜಿಸುತ್ತಾ ಬಂದಿದ್ದು ಇದೆ ಮೊದಲ ಬಾರಿಗೆ 3 ದಿನಗಳ ತರಬೇತಿಯನ್ನು ಆಯೋಜಿಸಿರುವುದು ತುಂಬ ಸಂತೋಷದ ವಿಷಯವಾಗಿದೆ ಅದರಲ್ಲಿಯು ಪ್ರಮುಖವಾಗಿ ಈ ತರಬೇತಿಯನ್ನು ಸಹಕಾರ ಚಳುವಳಿಯ ಕರ್ಮ ಭೂಮಿಯಾದ ಗದಗ ಜಿಲ್ಲೆಯಲ್ಲಿ ಆಯೋಜಿಸಿರುವುದು ಬಹಳ ಹೆಮ್ಮೆಯ ವಿಷಯವಾಗಿದೆ ಎಂದು ನುಡಿದರು.

# ಸೌಹಾರ್ದ ಸಹಕಾರಿಗಳ ಸುಸ್ಥಿರ ಅಭಿವೃದ್ಧಿ : ಪ್ರಗತಿ ಪಥದಲ್ಲಿರುವ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಉನ್ನತ ಮಟ್ಟದ ತರಬೇತಿ ಕಾರ್ಯಕ್ರಮ

**ಬೆಂಗಳೂರು :** ರಾಜ್ಯದಲ್ಲಿ ಪ್ರಗತಿ ಪಥದಲ್ಲಿರುವ ಆಯ್ದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ 2 ದಿನಗಳ ತರಬೇತಿ ಕಾರ್ಯಕ್ರಮವನ್ನು ರಾಜ್ಯದ 4 ವಿಭಾಗಗಳಲ್ಲೂ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಗಳ ವಿವರಗಳು.

ಬೆಂಗಳೂರು ದಿನಾಂಕ : 7 & 8 ಆಗಸ್ಟ್ 2018, ಬೆಳಗಾವಿ (ದಾಂಡೇಲಿ) 21 & 22 ಆಗಸ್ಟ್ 2018, ಕಲಬುರಗಿ (ಗಂಗಾವತಿ) 23 & 24 ಆಗಸ್ಟ ಹಾಗೂ ಮೈಸೂರು (ಕುಂದಾಪುರ) 27 & 28 ಆಗಸ್ಟ್ 2018,

## ಬೆಂಗಳೂರು ದಿನಾಂಕ 7 & 8 ಆಗಸ್ಟ್ 2018

## ರಾಜ್ಯದ ಸೌಹಾರ್ದ ಸಹಕಾರಿಗಳ ಬೆಳವಣಿಗೆ ಉತ್ತಮವಾಗಿದೆ - ಶ್ರೀ ಹೆಚ್. ಬಾಲಶೇಖರ



**ಬೆಂಗಳೂರು :** ಬೆಂಗಳೂರು ವಿಭಾಗದ ಪ್ರಗತಿ ಪಥದಲ್ಲಿರುವ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಸೌಹಾರ್ದ ಸಹಕಾರಿಗಳ ಸುಸ್ಥಿರ ಅಭಿವೃದ್ಧಿ ಕುರಿತಾದ ಉನ್ನತ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿಗೆ ಸಮೀಪದಲ್ಲಿರುವ ಕಣ್ವ ರೆಸಾರ್ಟನಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಶ್ರೀ ಹೆಚ್. ಬಾಲಶೇಖರ ಸಹಕಾರ ಸಂಘಗಳ ಜಂಟಿನಿಬಂಧಕರು ಕಾನೂನು ಕೋಶ ಇವರು ಉದ್ಘಾಟಿಸಿ ಮಾತನಾಡುತ್ತ ರಾಜ್ಯದ ಸೌಹಾರ್ದ ಸಹಕಾರಿಗಳ ಬೆಳವಣಿಗೆ ಉತ್ತಮವಾಗಿದೆ. ಸೌಹಾರ್ದ ಸಹಕಾರಿಗಳಿಗೆ ಸ್ವಾಯತ್ತತೆ ಇದೆ. ಇದು ಸ್ವೇಚ್ಛಚಾರವಾಗಬಾರದು. ಷೇಣಿದಾರರ ಹಿತಾಸಕ್ತಿ ಹಾಗೂ ಸದಸ್ಯರ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚು ಗಮನ ಹರಿಸಬೇಕು. ಕಾನೂನು, ನಿಯಮ ಹಾಗೂ ಉಪವಿಧಿಗಳ ಚೌಕಟ್ಟಿನಲ್ಲಿ ಸಿಸ್ತಿನಿಂದ ಕಾರ್ಯನಿರ್ವಹಿಸದಾಗ ಸುಸ್ಥಿರ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಬಹಳ ಶಿಸ್ತು ಹಾಗು ಬದ್ಧತೆಯಿಂದ ನಡೆಯುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡೂರಾವ ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ಸ್ವಾಗತ ಮಾಡಿ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ವಿಭಾಗೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆಯವರು ವಂದನಾರ್ಪಣೆ ಸಲ್ಲಿಸಿದರು.

ಸಂಪನ್ಮೂಲವ್ಯಕ್ತಿಗಳಾಗಿ ಶ್ರೀ ಹೆಚ್.ಬಾಲಶೇಖರ, ಶ್ರೀ ಕೆ.ಎಸ್. ಮಹದೇವಸ್ವಾಮಿ, ಡಾ. ಇಳಂಗೋವನ್, ಶ್ರೀ ವೈ.ವಿ.ಗುಂಡೂರಾವ ಹಾಗೂ ಡಾ. ಹರೀಶರವರು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದರು.

# ಸಂವಾದ ಕಾರ್ಯಕ್ರಮ : ಸುಸ್ಥಿರ ಅಭಿವೃದ್ಧಿ - ಸಹಕಾರಿ ಸಂಸ್ಥೆಗಳ ಪಾತ್ರ

ಸೌಹಾರ್ದ ಸಹಕಾರಿಗಳ ಸುಸ್ಥಿರ ಅಭಿವೃದ್ಧಿಗೆ ಪೂರಕವಾಗುವಂತೆ ವಿವಿಧ ವಿಷಯಗಳ ಚರ್ಚೆಗೆ ಅವಕಾಶವಾಗುವಂತೆ ತಜ್ಞರ ಜೊತೆಗೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್.ಪರಶಿವಮೂರ್ತಿಯವರು ವಹಿಸಿದ್ದರು.

ಸಂವಾದಕರಾಗಿ ಡಾ. ಎಂ ಮೀರಾ ವಿಶೇಷ ಅಧಿಕಾರಿಗಳು ಪ್ರಾಧಿಕಾರ ಹಾಗು ಸಹಾಯಕ ಅಧ್ಯಾಪಕರು ಅಭಿವೃದ್ಧಿ ಅಧ್ಯಯನ ಸಂಸ್ಥೆ (ಐ.ಡಿ.ಎಸ್.) ಮೈಸೂರು ವಿಶ್ವವಿದ್ಯಾಲಯ ಮೈಸೂರು ಇವರು ಕಾರ್ಯಕ್ರಮ ನಿರ್ವಹಿಸಿದರು.

### ಸಂಪನ್ಮೂಲ ವ್ಯಕ್ತಿಗಳಾಗಿ

**ಡಾ. ಯಶವಂತ ಡೋಂಗ್ರೆ ಪ್ರಾಧ್ಯಾಪಕರು ಮೈಸೂರು ವಿಶ್ವವಿದ್ಯಾಲಯ :** ಸುಸ್ಥಿರ ಅಭಿವೃದ್ಧಿ ಸಹಕಾರಿಗಳ ಪಾತ್ರದ ಬಗ್ಗೆ ಮಾತನಾಡಿದರು. ಐ.ಸಿ.ಎ 2013ರಲ್ಲಿ ಸುಸ್ಥಿರ ಅಭಿವೃದ್ಧಿ ಮಾರ್ಗಸೂತ್ರಗಳನ್ನು ರಚಿಸಿದೆ. ಸಹಕಾರಿ ಸಂಸ್ಥೆಗಳಿಗೆ ಅಜೆಂಡಾ ದೊಡ್ಡದು. ಸದಸ್ಯ ಸಮುದಾಯದ ಅಭಿವೃದ್ಧಿ ಮುಖ್ಯ. ಸಹಕಾರಿ ಪರಿಸರ ನಿರ್ಮಾ ಣವಾಗಬೇಕು. ನಿರಂತರ ಅಭಿವೃದ್ಧಿ ಆಗುತ್ತಿರಬೇಕು. ಆಕಸ್ಮಿಕ ಬೆಳವಣಿಗೆಯಾಗಬಾರದು. ಬೆಳೆಯುವುದು ಮುಖ್ಯ. ಉಳಿಸಿಕೊಂಡು ಹೋಗುವುದು ಮುಖ್ಯ ಈ ನಿಟ್ಟಿನಲ್ಲಿ ಸಹಕಾರಿಗಳು ಕಾರ್ಯನಿರ್ವಹಿಸುವಂತಾಗಬೇಕು. ವಿಶಾಲ ಹೃದಯಿಯಾಗಿ ವಿಶ್ವವ್ಯಾಪಿಯಾಗಿ ಚಿಂತಿಸಿ ಸ್ಥಳೀಯವಾಗಿ ಕಾರ್ಯನಿರ್ವಹಿಸುವಂತೆ ನಮ್ಮ ಕಾರ್ಯಗಳು ಇರಬೇಕು

ಎಸ್.ಎನ್. ಅರುಣಕುಮಾರ ಅಪರ ನಿಬಂಧಕರು ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಇವರು ಸುಸ್ಥಿರ ಅಭಿವೃದ್ಧಿಯಲ್ಲಿ ಆಧುನಿಕ ತಂತ್ರಜ್ಞಾನದ ಮಹತ್ವದ ಬಗ್ಗೆ ಮಾತನಾಡುತ್ತಸೌಹಾರ್ದ ಸಹಕಾರಿಗಳ ಕಾರ್ಯ ಚೆನ್ನಾಗಿದೆ. ತರಬೇತಿ ವ್ಯವಸ್ಥೆ ಚೆನ್ನಾಗಿದೆ ಎಂದು ತಿಳಿಸಿಸುಸ್ಥಿರ ಅಭಿವೃದ್ಧಿಗೆ ಆಧುನಿಕ ತಂತ್ರಜ್ಞಾನದ ಅಳವಡಿಸುವಿಕೆ ಬಹಳ ಪ್ರಯೋಜನಕಾರಿಯಾಗುತ್ತದೆ. ಇ ಕಾಮರ್ಸ್. ಇ ಮಾರ್ಕೆಟಿಂಗ ಇ ವೋಟಿಂಗ, ಡಾಟಾ ಅನೆಲಿಸಿಸ ಆಗಬೇಕು, ಮಾನವ ಸಂಪರ್ಕಕ್ಕೆ ಹೆಚ್ಚಿನ ಆದ್ಯತೆ ಇರಬೇಕ ಸಭದ್ರ ಆಡಳಿತ ವ್ಯವಸ್ಥೆ ಕಡ್ಡಾಯ ವೆಬ್ ಸೈಟ್ ಅಳವಡಿಸುವಿಕೆ ಆಗಬೇಕು ಎಂದು ತಿಳಿಸಿದರು.,



**ವೈ.ವಿ.ಗುಂಡೂರಾವ :** ಸಹಕಾರಿ ಕ್ಷೇತ್ರದ ಸವಾಲುಗಳು ಹಾಗು ಅವಕಾಶಗಳ ಬಗ್ಗೆ ಮಾತನಾಡಿದರು ಮತ್ತು ನಮ್ಮ ಹಿಂದೆ ನಮ್ಮ ಮುಂದೆ ಹಾಗೂ ನಮ್ಮ ಜೊತೆಯಲ್ಲಿರುವವರನ್ನು ಗುರುತಿಸಿ ಗಮನಿಸಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. .

ಎಸ್.ಎನ್. ಅರುಣಕುಮಾರ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಸರಕಾರದ ಪಾತ್ರ. ಸರಕಾರ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಬದ್ಧವಾಗಿದೆ. ಸರಕಾರ ಬಹಳವಾಗಿ ಯೋಜನೆಗಳನ್ನು ಹಾಕುವುದನ್ನು ನಿಲ್ಲಿಸಬೇಕು. ಇರುವ ಯೋಜನೆಗಳನ್ನು ಭದ್ರಪಡಿಸಬೇಕು ವಿಶಾಲ ತಳಹದಿಯ ಮೇಲೆ ದೂರ ದೃಷ್ಟಿಯ ಯೋಜನೆಗಳ ಅನುಷ್ಠಾನಗಳು ಅಗತ್ಯ

ಡಾ ಇಳಂಗೋವನ್ ನಿರ್ದೇಶಕರು ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಇವರು ಸಹಕಾರಿಗಳ ಮಧ್ಯೆ ಆಂತರಿಕ ಸಹಕಾರದ ಕೊರತೆಯಿಂದ ಸುಸ್ಥಿರ ಅಭಿವೃದ್ಧಿಗೆ ಹಿನ್ನಡೆ. ಸಹಕಾರಿಗಳು ಒಕ್ಕಟ್ಟಾಗಿ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುವುದು ಅಗತ್ಯ ಎಂದರು.

ವಿಷಯಗಳ ಬಗ್ಗೆ ಉತ್ತಮವಾಗಿ ಚರ್ಚೆಗಳು ನಡೆದವು ನಂತರ ಕೊನೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದ ಶ್ರೀ ಪರಶಿವಮೂರ್ತಿಯವರು ಮಾತನಾಡಿ ಈ ಸಂವಾದದಲ್ಲಿ ಅಳವಡಿಸಿದ ವಿಷಯಗಳು, ವಿಷಯ ಮಂಡನೆ ಅದರ ಮೇಲೆ ಚರ್ಚೆ ಎಲ್ಲವೂ ಉತ್ತಮವಾಗಿತ್ತು. ಇಂತಹ ಕಾರ್ಯಕ್ರಮಗಳು ಸುಸ್ಥಿರ ಅಭಿವೃದ್ಧಿಗೆ ಪೂರಕ ಎಂದು ತಿಳಿಸಿ ಸಹಕಾರಿ ಸಂಸ್ಥೆಗಳ ಯಶಸ್ಸಿಗೆ ಹೆಚ್ಚಿನ ಸಕಾರಾತ್ಮಕ ಪ್ರಚಾರಕ್ಕೆ ಆದ್ಯತೆ ಅಗತ್ಯ. ನಕಾರಾತ್ಮಕ ಪ್ರಚಾರ ಸುಸ್ಥಿರ ಅಭಿವೃದ್ಧಿಗೆ ಮಾರಕವಾಗಿದೆ. ಇದನ್ನು ತಡೆಯಲು ಪ್ರಯತ್ನಗಳು ಅಗತ್ಯ ವಂದನಾರ್ಪಣೆಯನ್ನು ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ. ಅಧ್ಯಕ್ಷರು ಸಂಯುಕ್ತ ಸಹಕಾರಿ ನೆರವೇರಿಸಿದರು.

ಕಾರ್ಯಕ್ರಮದಲ್ಲಿ 31 ಸೌಹಾರ್ದ ಸಹಕಾರಿಗಳ 34 ಮುಖ್ಯ

ಕಾರ್ಯನಿರ್ವಾಹಕರು ಭಾಗವಹಿಸಿ ಪ್ರಯೋಜನ ಪಡೆದರು.

ರಾಜ್ಯದ ಪ್ರಗತಿ ಪಥದಲ್ಲಿರುವ ಸೌಹಾರ್ದ ಸಹಕಾರಿಗಳ

**ಅಧ್ಯಕ್ಷರುಗಳ ಸಮಾಲೋಚನೆ ಸಭೆಗಳ ಕ್ರೋಢೀಕೃತ ಅಭಿಪ್ರಾಯಗಳು :**

**ಬೆಂಗಳೂರು : ದಿನಾಂಕ 8-8-2018 ಕಣ್ವ ರೆಸಾರ್ಟ ಬೆಂಗಳೂರು**

- ಸಂಯುಕ್ತ ಸಹಕಾರಿಯ ಆಡಳಿತ ವ್ಯವಸ್ಥೆ ಚುರುಕಾಗಿದೆ. ಸಿಬ್ಬಂದಿಯವರ ಮೇಲಿನ ದೂರುಗಳು ಆಕ್ಷೇಪಣೆಗಳನ್ನು ಸರಿಪಡಿಸಲಾಗಿದೆ. ಸಿಬ್ಬಂದಿಯವರು ಕ್ರೀಯಾಶೀಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
- ವಿಭಾಗೀಯ ಕಚೇರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.
- ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ.
- ತರಬೇತಿ ಕಾರ್ಯಕ್ರಮಗಳು ಉತ್ತಮವಾಗಿ ನಡೆಯುತ್ತಿವೆ.
- ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಗೆ ಕ್ರಮವಿಡುವುದು ಅಗತ್ಯ.
- ಸೌಹಾರ್ದ ಸಹಕಾರಿಗಳ ಬ್ಯಾಂಕ ಸ್ಥಾಪನೆಗೆ ಕ್ರಮವಿಡುವುದು
- "ಸಹಕಾರಿ ಡಿಪ್ಲೋಮಾ ಪ್ರಾರಂಭಿಸಬೇಕು"
- ಆಡಿಟ್ ಗ್ರೇಡಿಂಗ/ಕ್ಲಾಸಿಫಿಕೇಶನ್ ಬಗ್ಗೆ ತೀರ್ಮಾನಿಸಬೇಕು.
- ಕಾಮನ್ ಫಾರ್ಮೆಟ್ಸ ಸಿದ್ಧಪಡಿಸಬೇಕು,
- ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಕುರಿತಂತೆ ಮ್ಯಾನ್ಯುಯಲ್ (ಕೈಪಿಡಿ ) ಸಿದ್ಧಪಡಿಸಬೇಕು.
- ಸರ್ವಿಸ್ ಪ್ರೋವೈಡರ್ಸ ಪಟ್ಟಿ ತಯಾರಿಸಬೇಕು.

ಇದೇ ಸಂದರ್ಭದಲ್ಲಿ ಸಭೆಯಲ್ಲಿ ಉಪಸ್ಥಿತರಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಪ್ರಸನ್ನಕುಮಾರರವರು ಮಾತನಾಡಿ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳಿಂದ ರಚನೆಯಾಗಿರುವ ಸಂಸ್ಥೆ. ಈ ವ್ಯವಸ್ಥೆ ಈ ದೇಶದಲ್ಲಿ ಮಾದರಿ ವ್ಯವಸ್ಥೆ. ನೊಂದಣಿಯಾಗುವ ಮೊದಲು ಸಂಯುಕ್ತ ಸಹಕಾರಿಯಿಂದ ಎನ್.ಓ.ಸಿ ಪಡೆಯುವ ವ್ಯವಸ್ಥೆ ಜಾರಿಗೆ ಬರುವುದು ಒಳ್ಳೆಯದು ಎಂದರು.

ನಿರ್ದೇಶಕ ಶ್ರೀ ಲಕ್ಷ್ಮೀಕಾಂತ ರೆಡ್ಡಿಯವರು ಮಾತನಾಡಿ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ತೊಂದರೆಗಳ ನಿವಾರಣೆಗೆ ಕ್ರಮವಿಡಬೇಕೆಂದರು. ನಿರ್ದೇಶಕ ಬಿ.ಎಸ್. ಗುಂಡೂರಾವರವರು ಮಾತನಾಡಿ, ಸೌಹಾರ್ದ ಸಹಕಾರಿಗಳ ಬಹುತೇಕ ಸಮಸ್ಯೆಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಸ್ಪಂದಿಸುತ್ತಿದೆ. ಕನಿಷ್ಠ ವ್ಯವಹಾರದ ಮೇಲೆ ಅರ್ಹ ಮತದಾರ ಪಟ್ಟಿಯನ್ನು ಸಿದ್ಧಪಡಿಸುವುದರಲ್ಲಿ ಸಹಕಾರಿಗಳಿಗೆ ಸಮಸ್ಯೆಯಾಗುತ್ತಿದೆ. ಈ ಬಗ್ಗೆ ಸಂಯುಕ್ತ ಸಹಕಾರಿಯು ಗಮನ ಹರಿಸಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ

1. 2020ಕ್ಕೆ ಬೆಂಗಳೂರು ಕೇಂದ್ರ ಕಚೇರಿಗೆ ಹಾಗೂ ಹಾಗೂ ಬೆಳಗಾವಿ ವಿಭಾಗೀಯ ಕಚೇರಿಯ ಕಟ್ಟಡಗಳ ಉದ್ಘಾಟನೆ ಗುರಿ ಹೊಂದಲಾಗಿದೆ.
2. ಕಟ್ಟಡಗಳ ನಿರ್ಮಾಣದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪಾಲು ಅವಶ್ಯಕ.
3. ಎಸ್.ಡಿಓಗಳಿಗೆ ಶೀಘ್ರದಲ್ಲಿಯೇ ಜಿಲ್ಲಾ ಸಂಯೋಜಕರೆಂದು ಪುನರ್ನಾಮಕರಣ ಮಾಡಿ ಅವರುಗಳು ಸೌಹಾರ್ದ ಸಹಕಾರಿಗಳ ಫ್ರೆಂಡ್ ಫಿಲಾಸಾಫರ್ ಮತ್ತು ಗೈಡ್ ಆಗಿ ಕಾರ್ಯನಿರ್ವಹಿಸುವಂತೆ ಸೂಚಿಸಲು ಕ್ರಮವಿಡಲಾಗುತ್ತಿದೆ.
4. ಪ್ರಸಕ್ತ ಸಾಲಿನಲ್ಲಿ ಯಾವುದೇ ಹೊಸ ಸಮಸ್ಯಾತ್ಮಕ ಸಹಕಾರಿಗಳು ಹುಟ್ಟಿಕೊಂಡಿರುವುದಿಲ್ಲ. ಸಮಸ್ಯಾತ್ಮಕ ಸಹಕಾರಿಗಳ ಬೆಳವಣಿಗೆಗೆ ಕಡಿವಾಣ ಹಾಕಲಾಗಿದೆ. ಹಿಂದಿನ ಸಮಸ್ಯಾತ್ಮ ಸಹಕಾರಿಗಳ ಬಗ್ಗೆ ಕಾನೂನು ಕ್ರಮಗಳು ಜಾರಿಯಲ್ಲಿವೆ.
5. ಕಾಯ್ದೆ ತಿದ್ದುಪಡಿಗೆ ಕ್ರಮವಿಡಲಾಗುತ್ತಿದೆ.
6. ಎಲ್ಲಾ ಒಕ್ಕೂಟಗಳ ರಚನೆಗೆ ಕ್ರಮ
7. ಜಿಲ್ಲಾ ಮಟ್ಟದಲ್ಲಿ ಆಡಿಟರ್ ಪ್ಯಾನೆಲ್, ವಕೀಲರ ಪ್ಯಾನೆಲ್. ಸಂಪನ್ಮೂಲ ವ್ಯಕ್ತಿಗಳ ಪ್ಯಾನೆಲ್, ಕಾಮನ್ ಫಾರ್ಮ ಸಿದ್ಧತೆಗೆ ಕ್ರಮ, ವಸೂಲಾತಿಗೆ ಎಂಪಾನೆಲ್ಮೆಂಟ್ಗೆ ಕ್ರಮ
8. ಸೌಹಾರ್ದ ಸಹಕಾರಿಗಳ ಅಪೆಕ್ಸ ಬ್ಯಾಂಕ ಸ್ಥಾಪನೆಗೆ ಕ್ರಮ
9. ದೂರ ಶಿಕ್ಷಣದ ಮೂಲಕ ಸಹಕಾರಿ ಡಿಪ್ಲೋಮಾ ಕೋರ್ಸ ಪ್ರಾರಂಭಿಸಲು ಕ್ರಮ,
10. ಸ್ಮಾಲ್ ಬ್ಯಾಂಕ ಸ್ಥಾಪನೆಗೆ ಕ್ರಮ

ಬೆಂಗಳೂರು ವಿಭಾಗೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆಯವರು ವಂದನಾರ್ಪಣೆ ಸಲ್ಲಿಸಿದರು.

## ಸಂಯುಕ್ತ ಸಹಕಾರಿಯ ಕಟ್ಟಡಗಳಿಗೆ ನೆರವು : ಸಮಾಲೋಚನಾ ಸಭೆಯಲ್ಲಿ ಸೌಹಾರ್ದ ಸಹಕಾರಿಗಳ ಒಮ್ಮತದ ಬೆಂಬಲ



ಸಂಯುಕ್ತ ಸಹಕಾರಿಯು 4 ವಿಭಾಗಗಳಲ್ಲಿ ಏರ್ಪಡಿಸಿದ್ದ ಪ್ರಗತಿ ಪಥದಲ್ಲಿ ಸಾಗುತ್ತಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳ ಸಮಾಲೋಚನಾ ಸಭೆಯಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಸಂಯುಕ್ತ ಸಹಕಾರಿಯು ಬೆಂಗಳೂರಿನಲ್ಲಿ ನಿರ್ಮಿಸುತ್ತಿರುವ ಕಟ್ಟಡ, ಬೆಳಗಾವಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಟ್ಟಡ 2020ಕ್ಕೆ ಬೆಂಗಳೂರು ಕೇಂದ್ರ ಕಚೇರಿಗೆ ಹಾಗೂ ಹಾಗೂ ಬೆಳಗಾವಿ ವಿಭಾಗೀಯ ಕಚೇರಿಯ ಕಟ್ಟಡಗಳ ಉದ್ಘಾಟನೆ ಗುರಿ ಹೊಂದಲಾಗಿದೆ. ಮೈಸೂರು ಹಾಗೂ ಕಲಬುರಗಿ ವಿಭಾಗಗಳಲ್ಲೂ ಸ್ವಂತ ಕಟ್ಟಡಕ್ಕಾಗಿ ಪ್ರಯತ್ನ ನಡೆಸಲಾಗುತ್ತಿದೆ. ಇವೆಲ್ಲವುಗಳ ಅಂದಾಜು ವೆಚ್ಚ ರೂ 20ಕೋಟಿ ರೂಗಳಾಗಬಹುದು ಈ ಹಣವನ್ನು ಹೊಂದಿಸುವುದು ಸಂಯುಕ್ತ ಸಹಕಾರಿಗೆ ಕಷ್ಟದ ಕೆಲಸವೇನಲ್ಲ. ಆದರೆ ಕಟ್ಟಡಗಳ ನಿರ್ಮಾಣದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪಾಲು ಅವಶ್ಯಕ ಇದರಲ್ಲಿ ಎಲ್ಲರೂ ಪಾಲ್ಗೊಳ್ಳಬೇಕೆಂಬುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಅಪೇಕ್ಷೆಯಾಗಿದೆ. ಆದ್ದರಿಂದ ತಾವುಗಳು ತಮ್ಮ ಅಭಿಪ್ರಾಯವನ್ನು ಸಲಹೆಗಳನ್ನು ನೀಡಬೇಕು ಎಂದು ಕೋರಿದರು.

**ಇದಕ್ಕೆ ಪ್ರತಿಯಾಗಿ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳ ಅಭಿಪ್ರಾಯಗಳು :**

1. ಹಲವಾರು ಸೌಹಾರ್ದ ಸಹಕಾರಿಗಳು ರಾಜ್ಯದ ಸಂಯುಕ್ತ ಸಹಕಾರಿಯ ಕಟ್ಟಡಗಳಿಗೆ ಸಂಬಂದಿಸಿದಂತೆ ಅಗತ್ಯವಾಗುವ ಹಣಕಾಸಿನ ಸಂಗ್ರಹಕ್ಕೆ ಸಂಬಂದಿಸಿದಂತೆ ಸಂಯುಕ್ತ ಸಹಕಾರಿಯು ಕೇಳುವ ಮೊತ್ತವನ್ನು ಪಾವತಿಸಲು ಬದ್ಧವಾಗಿದೆ. ಇದೊಂದು ಸಮಸ್ಯೆಯೇನಲ್ಲ
2. ಕೆಲವು ಸೌಹಾರ್ದ ಸಹಕಾರಿಗಳು ಮಾತನಾಡಿ, ಒಟ್ಟಾರೆ ಸೌಹಾರ್ದ ಸಹಕಾರಿ ಕ್ಷೇತ್ರದ ದುಡಿಯುವ ಬಂಡವಾಳದ ಶೇ. 2% ಕೊಟ್ಟರೆ ರೂ. 38 ಕೋಟಿ ಆಗುತ್ತದೆ.
3. ತುಮಕೂರಿನ ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಒಂದು ಲಕ್ಷ ಒಂದು ರೂ ಕೋಡುವುದಾಗಿ ತಿಳಿಸಿದರು.
4. ಬಿ ಹೆಚ್.ಕೃಷ್ಣಾರೆಡ್ಡಿಯವರು ಪಾವಗಡ ಸೌಹಾರ್ದ ಸಹಕಾರಿಯ ವತಿಯಿಂದ ಸಂಯುಕ್ತ ಸಹಕಾರಿಯ ಕಟ್ಟಡಗಳ ನೆರವಿಗೆ ಸಂಬಂದಿಸಿದಂತೆ ರಾಜ್ಯದೇ ಯಾವುದೆ ಸೌಹಾರ್ದ ಸಹಕಾರಿಯು ನೀಡುವ ಮೊತ್ತಕ್ಕಿಂತ ಒಂದು ಲಕ್ಷ ರೂ ಹೆಚ್ಚುವರಿಯಾಗಿ ಪಾವತಿಸಲಾಗುವುದು ಎಂದರು.
5. ಸಭೆಯಲ್ಲಿ ಹಾಜರಿದ್ದ ಎಲ್ಲ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ ಎಂದು ತಮ್ಮ ಒಪ್ಪಿಗೆ ನೀಡಿದರು.

## ಉನ್ನತ ಮಟ್ಟದ ತರಬೇತಿ ಬೆಳಗಾವಿ (ಉತ್ತರ ಕನ್ನಡ) ದಿನಾಂಕ : 21 ಮತ್ತು 22 ಆಗಸ್ಟ್ 2018



ಶ್ರೀ ಸಿದ್ರಾಮಪ್ಪ ಉಪ್ಪಿನರವರು ಉದ್ಘಾಟಿಸುತ್ತಿರುವ ಚಿತ್ರದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಸರಸ್ವತಿ, ವೃತ್ತಿಪರ ನಿರ್ದೇಶಕ ಶ್ರೀ ಎಂ.ಜಿ. ಪಾಟಿಲ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಮತ್ತಿತರು.

### ಸಂವಾದ ಕಾರ್ಯಕ್ರಮ

**ಉತ್ತರ ಕನ್ನಡ :** ಸದರಿ ಸಭೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಸಂಯುಕ್ತ ಸಹಕಾರಿಯ ಉತ್ತರ ಕನ್ನಡ ಜಿಲ್ಲೆಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ, ಹಾಗೂ ಶ್ರೀ ಶರಣಗೌಡ ಜಿ ಪಾಟೀಲ್ ಮಾನ್ಯ ವ್ಯವಸ್ಥಾಪಕ ನಿದೇಶಕರು ಕರಾಸೌಸಂಸನಿ.,ಬೆಂಗಳೂರು ಇವರುಗಳನ್ನು ಅತಿಥಿಗಳಾಗಿ ಉಪಸ್ಥಿತರಿದ್ದರು. ಸಭೆಯಲ್ಲಿ 25 ಸೌಹಾರ್ದ ಸಹಕಾರಿಗಳಿಂದ 45 ಅಭ್ಯರ್ಥಿಗಳು ಹಾಜರಿದ್ದರು.

ಸದರಿ ಸಭೆಯ ಸಮಾರೋಪ ಸಮಾರಂಭದ ಉದ್ಘಾಟನಾ ಕಾರ್ಯಕ್ರಮಕ್ಕೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣರೆಡ್ಡಿ, ಮತ್ತು ಬೆಳಗಾವಿ ಪ್ರಾಂತ್ಯದ ಎಲ್ಲಾ ನಿರ್ದೇಶಕರನ್ನು ಆಹ್ವಾನಿಸಲಾಗಿತ್ತು.

ಸದರಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣರೆಡ್ಡಿ ರವರು ಸಂಯುಕ್ತ ಸಹಕಾರಿ ಕಾಯ್ದೇ ದೇಶದಲ್ಲಿಯೇ ಒಂದು ವಿಶೇಷ ಮತ್ತ ವಿಶಿಷ್ಟವಾದ ಸಹಕಾರಿ ಮಾದರಿಯಾಗಿದ್ದು ಈ ವಿಧವಾದ ಕಾಯ್ದೇಯನ್ನು ಈಡಿ ದೇಶದ ಎಲ್ಲ ರಾಜ್ಯಗಳಲ್ಲಿಯು ಜಾರಿಗೆ ತರುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಕಾರ್ಯೋನ್ ಮುಖವಾಗಿದೆ ಎಂದು ತಿಳಿಸಿದರು.

ನಂತರ ತಮ್ಮ ಮಾತನ್ನು ಮುಂದು ವರೆಸುತ್ತ ರಾಜ್ಯದಲ್ಲಿ ಹೆಚ್ಚು ದುಡಿಯುವ ಬಂಡವಾಳವನ್ನು ಹೋಂದಿ ಯಶ್ವಸಿಯಾಗಿ ಕಾರ್ಯನಿವಹಿಸುತ್ತಿರುವ ಸವಹಾರ್ದ ಸಹಕಾರಿಗಳಿಗಾಗಿ ಉನ್ನತ ಕಾರ್ಯಕ್ಷಮತೆ ತರಬೇತಿ (High tech Training) ಏರ್ಪಡಿಸದ್ದು ಇದರ ಸದುಪಯೋಗವನ್ನು ಸದಸ್ಯ ಸಹಕಾರಿಗಳು ಪಡೆದು ಕೋಂಡಿರುವುದಾಗಿ ಬಾವಿಸಿದ್ದೆನೆ ಹಾಗೂ ತಾವು ಇಲ್ಲಿ ಗಳಿಸಿರುವಂತಹ ಜ್ಞಾನವನ್ನು ತಮ್ಮ ಸಹಕಾರಿಗಲ್ಲಿ ಉಪಯೋಗಿಸಿ ತಮ್ಮ ಸಹಕಾರಿಯ ಬೆಳವಣಿಗೆಗೆ ಸಹಕಾರಿಗಳಾಗಬೆಕೆಂದು ನುಡಿದರು.



ಸಂಯುಕ್ತ ಸಹಕಾರಿಯು ಸ್ವಂತ ಕಟ್ಟಡವನ್ನು ನಿರ್ಮಿಸುತಿದ್ದು ಅದಕ್ಕೆ ಬೆಕಾಗಿರುವ ಸಂಪನ್ಮೂಲಗಳನ್ನು ಸದಸ್ಯ ಸಹಕಾರಿಗಳು ಸಹಾಯ ಮಾಡಬೇಕೆಂದು ಮನವಿ ಮಾಡಿದರು ಅದಕ್ಕೆ ಸಭೆಯಲ್ಲಿ ಉಪಸ್ಥತರಿದ್ದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ನಿರ್ವಾಹಕರು ಚಪ್ಪಾಳೆ ಮೂಲಕ ಸ್ವಾಗತಿಸಿದರು ಹಾಗೂ ಸಂಯುಕ್ತ ಸಹಕಾರಿಯ ಸ್ವಂತ ಕಟ್ಟಡಕ್ಕೆ ಅವಶ್ಯ ನೆರವು ನೀಡುವುದಾಗಿ ಸಭೆಗೆ ತಿಳಿಸಿದರು.

## ಸಮಾಲೋಚನಾ ಸಭೆ- ದಾಂಡೇಲಿ

ದಿನಾಂಕ : 22 –8–2018 ರಂದು ವ್ಹಿಸಲ್ ವುಡ್ಸ ರೆಸಾಟ್ ದಾಂಡೇಲಿ ಸಮಾಲೋಚನಾ ಸಭೆಯ ಅಭಿಪ್ರಾಯಗಳು.

1. ಸಹಕಾರಿಗಳನ್ನು ಸಂಶಯಾತ್ಮಕವಾಗಿ ನೋಡುವುದನ್ನು ನಿಲ್ಲಿಸಬೇಕು.
2. ಕಾಯ್ದೆ ತಿದ್ದುಪಡಿಗಳ ಬಗ್ಗೆ ನಿರಂತರ ಹೋರಾಟ ಅಗತ್ಯ.
3. ಆದಾಯ ತೆರಿಗೆ ಕಿರುಕುಳ ತಪ್ಪಿಸಲು ಹೊರಾಟ ಅಗತ್ಯ.
4. ಸದಸ್ಯರಲ್ಲದವರ ಜೊತೆಗೆ ವ್ಯವಹಾರ ಮಾಡಬಾರದು ಎಂಬುದು ಸರಿಯಲ್ಲ. ಪ್ರಾಕ್ಟಿಕಲ್ ತೊಂದರೆಗಳ ನಿವಾರಣೆಗೆ ಕ್ರಮ ಅಗತ್ಯ. ಸೌಹಾರ್ದ ನ್ಯಾಯಾಲಯದ ಚಟುವಟಿಕೆಗಳು ಚುರುಕಾಗಬೇಕು. ವಿಳಂಬವನ್ನು ತಪ್ಪಿಸಲು ಕ್ರಮ ಅಗತ್ಯ.
5. ಮಾರಾಟ ಅಧಿಕಾರಿಗಳ ನೇಮಕಕ್ಕೆ ಕ್ರಮ ಅಗತ್ಯ.
6. ಹುಬ್ಬಳ್ಳಿಯಲ್ಲಿ ಸಂಚಾರಿ ಪೀಠ ಪ್ರಾರಂಭಿಸಲು ಕ್ರಮ
7. ಕೋರ್ಟ ಕೆಲಸಕ್ಕೆ ಬರುವ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗೆ ಅತಿಥಿಗ್ರಹ ವ್ಯವಸ್ಥೆ.
8. ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗೆ ಜಿಲ್ಲಾ ಮಟ್ಟದಲ್ಲಿ ತರಬೇತಿ.



9. ಕನ್ಸೋರ್ತಿಯಮ್ ಹಣಕಾಸು ವ್ಯವಸ್ಥೆ ಅವಶ್ಯಕ.
10. ಕಚೇರಿ ಕೈಪಿಡಿ, ಠೇವಣಿ ನಿಯಮಗಳು, ಸಾಲ ನಿಯಮಗಳು, ಮಾದರಿ ಉಪನಿಯಮಗಳು ಬೇಕು.
11. ಲೋಕ ಅದಾಲತ್ ವ್ಯವಸ್ಥೆ ಅಳವಡಿಸುವಿಕೆ ಬಗ್ಗೆ ಪರಿಶೀಲನೆ ಅಗತ್ಯ.
12. ಸಂಯುಕ್ತ ಸಹಕಾರಿಯಿಂದ ಉತ್ತಮ ಸೌಹಾರ್ದ ಸಹಕಾರಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವುದಾಗಬೇಕು.
13. ಪ್ರತಿ ವಿಭಾಗದಲ್ಲಿ “ಕಾನೂನು ಸಲಹಾ ಸಮೀತಿ” ಅಗತ್ಯ.

ಚುನಾವಣೆಗಳ ಬಗ್ಗೆ ಸೂಕ್ತ ಮಾಹಿತಿ ಹಾಗು ವೆಚ್ಚಗಳ ಬಗ್ಗೆ ಕಡಿವಾಣಕ್ಕೆ ಕ್ರಮ ಅಗತ್ಯ.

# ಉನ್ನತ ಮಟ್ಟದ ತರಬೇತಿ - ಕಲಬುರಗಿ (ಗಂಗಾವತಿ) ದಿನಾಂಕ : 23 ಮತ್ತು 24 ಆಗಸ್ಟ್ 2018

**ಗಂಗಾವತಿ :** ದಿನಾಂಕ : 23-08-2018 ರ ಗುರುವಾರ ಸಮಯ 10:30 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಪ್ರಾಂತೀಯ ಕಛೇರಿ ಕಲಬುರ್ಗಿ ವತಿಯಿಂದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳ ಉನ್ನತ ಮಟ್ಟದ ತರಬೇತಿ ಹಾಗೂ ಸಹಕಾರಿಯ ಅಧ್ಯಕ್ಷರು / ನಿರ್ದೇಶಕರೊಂದಿಗೆ ಸಮಾಲೋಚನಾ ಸಭೆ "ಎರಡು ದಿನಗಳ ಉನ್ನತ ಮಟ್ಟದ ತರಬೇತಿ" ಕಾರ್ಯಗಾರವನ್ನು ಕಿಷ್ಕಿಂದ ಹೇರಿಟೇಜ್ ರೆಸಾರ್ಟ್, ಸ್ಟೋನ್ ಬ್ರೀಡ್ಜ್ ಕ್ರಾಸ್ (ಹಂಪಿ) ಹತ್ತಿರ, ಸನಾಪುರ, ಆನೆಗುಂದಿ, ತಾ॥ ಗಂಗಾವತಿ, ಜಿ॥ ಕೊಪ್ಪಳ ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ಅಧ್ಯಕ್ಷರು, ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಸಹಕಾರಿ ಸಂಸ್ಥೆಗಳ ಬಗ್ಗೆ ವ್ಯಂಗ್ಯ ಮಾಡಿದವರೆ ಇಂದು ಸಹಕಾರಿ ಸಂಸ್ಥೆ ಪ್ರಾರಂಭಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷ ಶ್ರೀ ಬಿ.ಎಚ್.ಕೃಷ್ಣಾರೆಡ್ಡಿ ಇವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉದ್ಯೋಗ ಸೃಷ್ಟಿಗೆ ಒತ್ತು ನೀಡಿವೆ ಮತ್ತು ಆರ್ಥಿಕ ಸಧೃಢತೆಗೆ ಸಾಕ್ಷಿಯಾಗಿವೆ ಎಂದು ಉಲ್ಲೇಖಿಸಿದರು. ಅಲ್ಲದೆ ಇವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ರಾಜ್ಯಾದ್ಯಾಂತ 4320ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಯಾಗಿದ್ದು ರೂ. 19ಸಾವಿರ ಕೋಟಿ ವಹಿವಾಟು ಹೊಂದಿದೆ. ಸರಾಸರಿ 250 ಕೋಟಿ ರೂಪಾಯಿಗಳು ಲಾಭಗಳಿದ್ದು 60 ಲಕ್ಷಕ್ಕೂ ಹೆಚ್ಚು ಸದಸ್ಯರಿದ್ದಾರೆ ಎಂದು ಕಾರ್ಯಕ್ರಮದಲ್ಲಿ ಹಾಜರಿದ್ದ ಪ್ರತಿನಿಧಿಗಳಿಗೆ ತಿಳಿಸಿದರು.

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲ, ಶ್ರೀ ಸಂಜೀವ ಮಹಾಜನ, ಶ್ರೀ ಜಿ. ಶ್ರೀಧರ್ ಶ್ರೀ ಬಿ. ರಾಜಶೇಖರ ಇವರುಗಳು ಬಾಗವಹಿಸಿದ್ದರು.



ಇವರೊಂದಿಗೆ ವೇದಿಕೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಉಪಸ್ಥಿತರಿದ್ದರು.

ಸ್ವಾಗತವನ್ನು ಮಾನ್ಯ ನಿರ್ದೇಶಕರಾದ ಜಿ.ಶ್ರೀಧರ ಪ್ರಾಸ್ತಾವಿಕವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗು ಕಾರ್ಯಕ್ರಮದ ವಂದನಾರ್ಪಣೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಬಿ ರಾಜಶೇಖರ ಇವರು ನೆರವರಿಸಿಕೊಟ್ಟರು.

ಕಾರ್ಯಗಾರದ ಮೊದಲ ಅವಧಿಯನ್ನು ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು "ಹಣಕಾಸು ನಿರ್ವಹಣೆ ಹಾಗು

ಆರ್ಥಿಕ ಶಿಸ್ತು" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ವಿಶ್ವನಾಥ ಹೀರೆಮಠ ಇವರು ಸಹಕಾರಿ ಕ್ಷೇತ್ರದ ಅವಕಾಶಗಳು ಮತ್ತು ಸವಾಲುಗಳು ಎಂಬ ವಿಷಯದ ಬಗ್ಗೆ ಪ್ರತಿನಿಧಿಗಳಿಗೆ ತಿಳಿಸಿದರು. ಕೊನೆಯ ಅವಧಿಯಲ್ಲಿ ಡಾ.ಹರೀಶ ಇವರು"ಆರೋಗ್ಯ ಹಾಗು ಜೀವನ ಸಬಲತೆ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡುವುದರ ಮೂಲಕ ಆರೋಗ್ಯದ ಮನವರಿಕೆ ಮಾಡಿಕೊಟ್ಟರು.

ದಿನಾಂಕ : 24.08.2018 ರಂದು ಬೆಳಗ್ಗೆ ಖಖಅಓನಿವೃತ್ತ ನಿರ್ದೇಶಕರಾದ ಶ್ರೀಎಸ್.ಎ.ಸಿದ್ದಾಂತಿ ಇವರು "ಪತ್ತಿನ ಸಹಕಾರಿಗಳಲ್ಲಿ ವ್ಯವಹಾರ ಅಭಿವೃದ್ದಿ" ಎಂಬ ಭವಿಷ್ಯದ ಬಗ್ಗೆ ಉಪನ್ಯಾಸ ನೀಡಿದರು.

## ಸಂವಾದ ಕಾಯಕ್ರಮ - ಗಂಗಾವತಿ

ದಿನದ ಎರಡನೇಯ ಅವಧಿಯಲ್ಲಿ ಸುಸ್ಥಿರ ಅಭಿವೃದ್ದಿಯಲ್ಲಿ ಸಹಕಾರಿಗಳ ಪಾತ್ರ ಕುರಿತು ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಸ್.ಎ. ಸಿದ್ದಾಂತಿ ವಹಿಸಿದ್ದರು.

ಸಂವಾದ ಕಾರ್ಯಕ್ರಮದಲ್ಲಿ "ಸಹಕಾರಿಗಳಲ್ಲಿ ಸಮಾಜಿಕ



ಜಾಲತಾಣಗಳ ಸದ್ಬಳಕೆ" ಎಂಬ ವಿಷಯವನ್ನು ಅಂಕಣಕಾರರಾದ ಶ್ರೀ ಅಮೃತ ಜೋಶಿ ಇವರು ಮಂಡಿಸಿದರು.

ಅದೇ ರೀತಿ ಇನ್ನೋರ್ವ ವಿಷಯತಜ್ಞರಾಗಿ ಆಗಮಿಸಿದ ಶ್ರೀ ಸಿ.ಎ.ವೀರಬಸವನಗೌಡ ಇವರು ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಬಗ್ಗೆ ಮಾಹಿತಿಯನ್ನು ಮಂಡಿಸಿದರು.

ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ವಿಶ್ವನಾಥ ಹೀರೆಮಠ ಶ್ರೀ ಬಿ ರಾಜಶೇಖರ ಮತ್ತು ಭ್ರಮರಾಂಬ ಸೌಹಾರ್ದ ಸ.ನಿ. ಮಸ್ಕಿಯ ಮುಖ್ಯ ಕಾರ್ಯನಿರ್ವಾಹಕರಾದ ವೀರೇಶ ಹೀರೆಮಠ ಇವರು ಉಪಸ್ಥಿತರಿದ್ದು ಚರ್ಚೆಯಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ಮೊದಲನೆ ದಿನ ಒಟ್ಟು 64 ಮತ್ತು ಎರಡನೇ ದಿನ 145 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನೆಯನ್ನು ಪಡೆದಿರುತ್ತಾರೆ.

## ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ ಶಾಸಕ ಶ್ರೀ ಪರಣ್ಣ ಮನವಳ್ಳಿಯವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು

ದಿನಾಂಕ : 24–8–2018 ಗಂಗಾವತಿಯ ಕಿಷ್ಕಿಂದ ರೆಸಾರ್ಟನಲ್ಲಿ ನಡೆಸಿದ ಸಮಾಲೋಚನಾ ಸಭೆ ಅಭಿಪ್ರಾಯಗಳು.

1. ನ್ಯಾಯಾಲಯದ ಕಾರ್ಯಚಟುವಟಿಕೆಗಳ ಬಗ್ಗೆ ಅಪಡೇಟ ಮಾಹಿತಿ ನೀಡುವ ಮೊಬೈಲ್ ಅಪ್ಲಿಕೇಶನ್ ಸಿದ್ಧಪಡಿಸಬೇಕು.
2. ಲೆಕ್ಕಪರಿಶೋಧನಾ ಶುಲ್ಕದ ಮರುಪರಿಶೀಲನೆ ಆಗಬೇಕು.
3. ಥರ್ಡ ಪಾರ್ಟಿ ಚೆಕ್ ಪಾವತಿಸುವ ಮೊತ್ತ 50,000 ನಿಂದ 5,00,000ಕ್ಕೆ ಹೆಚ್ಚಿಸುವ ಬಗ್ಗೆ ಕ್ರಮ ಅಗತ್ಯ.
4. ದುರ್ಬಲ ಸೌಹಾರ್ದ ಸಹಕಾರಿಗಳನ್ನು ಸಶಕ್ತ ಸೌಹಾರ್ದ ಸಹಕಾರಿಗಳನ್ನಾಗಿಸುವಲ್ಲಿ ಕ್ರಮವಿಡುವುದು.
5. ಎಲ್ಲ ಸೌಹಾರ್ದ ಸಹಕಾರಿಗಳಲ್ಲಿ ಏಕರೂಪ ದಾಖಲಾತಿ ವ್ಯವಸ್ಥೆ ಇರುವುದು ಉತ್ತಮ.
6. ಸೌಹಾರ್ದ ಸಹಕಾರಿಗಳ ನ್ಯಾಯಾಲಯ್ ಕಾರ್ಯ ವಿಳಂಬವಾಗದಂತೆ ಕ್ರಮ.
7. ನ್ಯಾಯಾಲಯದ ಕಾರ್ಯಚಟುವಟಿಕೆಗಳ ಬಗ್ಗೆ ತರಬೇತಿ ನೀಡುವಾಗ ಸಿ.ಪಿ.ಸಿ. ಬಗ್ಗೆ ತರಬೇತಿ ನೀಡುವುದು ಅಗತ್ಯ.
8. ಸೌಹಾರ್ದ ಸಹಕಾರಿಗಳನ್ನು ಅವರುಗಳ ಹಣಕಾಸಿನ ನಿರ್ವಹಣೆ ಹಾಗೂ ಕಾರ್ಯಚಟುವಟಿಕೆಗಳ ಆಧಾರದ ಮೇಲೆ ಗ್ರೇಡಿಂಗ ಮಾಡುವುದು.
9. ಲೆಕ್ಕಪರಿಶೋಧನೆ ಶುಲ್ಕ ಬಗ್ಗೆ ವಿವರಣೆ ಬೇಕು.
10. 80 ಪಿ.ಸೋಮೋಟೊ ನಿರ್ಣಯದ ವಿರುದ್ಧ ಹೋರಾಟ ಅಗತ್ಯ.
11. ವಿವಿಧ ಕಾರ್ಯಚಟುವಟಿಕೆಗಳ ಮಾದರಿ ಫಾರ್ಮಗಳನ್ನು ಸಿದ್ಧಪಡಿಸುವುದು.
12. 2ನೇ ಶನಿವಾರ ಹಾಗೂ 4ನೇ ಶನಿವಾರ ರಜಾದಿನವಾಗಬೇಕು.



13. ಕಾಯ್ದಿಟ್ಟ ನಿಧಿ ವಿನಿಯೋಗಕ್ಕೆ ಮಾರ್ಗಸೂಚಿ
14. ಸುಸತಿದಾರರ ಪಟ್ಟಿಯನ್ನು ಕಡಿಮೆ ಮಾಡಲು ಕ್ರಮ
15. ಮಹಿಳಾ ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚಾಗಬೇಕು
16. ಸೌಹಾರ್ದ ಅಕೆಡೆಮಿಗೆ 1 / 2 % ವಂತಿಗೆ ಅವಕಾಶ ಬೇಡ
17. ಕಲಬುರಗಿ ವಿಭಾಗದಲ್ಲಿ ಸಹಕಾರಿ ನ್ಯಾಯಾಲಯ ಪ್ರಾರಂಭಿಸುವುದು.
18. ಸ್ಟಾಂಪ ಡ್ಯುಟಿ ಬಗ್ಗೆ ಫಾರ್ಮ ನಂ 11.12 ತಿಳುವಳಿಕೆ ಕ್ರಮ
19. ಸಂಯುಕ್ತ ಸಹಕಾರಿಗಳ ಅನಾರೋಗ್ಯಕರ ಬೆಳವಣಿಗೆ ಸ್ಥಗಿತಕ್ಕೆ ಕ್ರಮ.
20. ಕ್ರೆಡಿಟ್ ಸಹಕಾರಿ ಸಂಸ್ಥೆಗಳಿಗೆ ಸಹಕಾರಿ ಬ್ಯಾಂಕಿಂಗ ಲೈಸನ್ಸ ನೀಡುವಂತೆ ಕ್ರಮವಿಡಬೇಕು.
21. ಸಹಕಾರಿಗಳ ಲಾಬಿ ಬಲವಾಗಿರಬೇಕು.
22. ಸಹಕಾರಿ ಕ್ಷೇತ್ರದ ಬಗ್ಗೆ ಅನುಭವಿ ನುರಿತ "ಸಹಕಾರಿ ಚಿಂತನಾ ಸಮೀತಿ" ರಚಿಸಬೇಕು (ಥಿಂಕ ಟ್ಯಾಂಕ)
23. ಸೌಹಾರ್ದ ಸಹಕಾರಿಗಳ ಸದಸ್ಯರ ವಿವರವನ್ನು ಆಧಾರ ಕಾರ್ಡಗೆ ಜೋಡಿಸಬೇಕು.

## ಉನ್ನತ ಮಟ್ಟದ ತರಬೇತಿ – ಮೈಸೂರು (ಕುಂದಾಪುರ) ದಿನಾಂಕ : 27 ಮತ್ತು 28 ಆಗಸ್ಟ್ 2018

**ಕುಂದಾಪುರ** : ಸೌಹಾರ್ದ ಸಹಕಾರಿಗಳು ಇನ್ನೂ ಉತ್ತಮವಾಗಿ ಕಾರ್ಯನಿರ್ವಹಿಸಿ, ಹೆಚ್ಚಿನ ಅಭಿವೃದ್ಧಿ ಪಥದಲ್ಲಿ ಮುಂದುವರಿಯಬೇಕು ಎಂಬ ಧ್ಯೇಯೋದ್ದೇಶದಿಂದ, ಪ್ರಾಂತದ ಪ್ರಮುಖ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗೆ 2 ದಿನದ “ಉನ್ನತ ಕಾರ್ಯಕ್ಷಮತೆ ತರಬೇತಿ” ಹಾಗೂ ಸೌಹಾರ್ದ ಸಹಕಾರಿಗಳ “ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರೊಡನೆ ಸಮಾಲೋಚನಾ ಸಭೆಯನ್ನು” ದಿನಾಂಕ : 27 ಮತ್ತು 28ನೇ ಆಗಸ್ಟ್ 2018 ರಂದು ಪ್ರಥಮ್ ಇನ್ ಅಂಡ್ ರೆಸಾರ್ಟ್, ಜಪ್ತಿ ಮುನಿಸಿಪಲ್ ವಾಟರ್ ಟ್ಯಾಂಕ್ ಎದುರು, ಕಂದಾವರ ಹಳ್ಳಿ, ಕುಂದಾಪುರ ತಾಲ್ಲೂಕು, ಉಡುಪಿಯಲ್ಲಿ ಆಯೋಜಿಸಲಾಗಿತ್ತು.

ಸದರಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ 27.08.2018 ರಂದು ಉದ್ಘಾಟಕರಾಗಿ ಶ್ರೀ ಬಿ.ಎಚ್. ಕೃಷ್ಣಾರೆಡ್ಡಿ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಹಾಗೂ ವೇದಿಕೆಯ ಮೇಲಿದ್ದ ಇತರ ಗಣ್ಯರೊಂದಿಗೆ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ನಂತರ ಮಾತಾನಾಡಿ ವ್ಯಾಪಾರ ಅಭಿವೃದ್ಧಿ ಮೂಲಕ ಸುಸ್ಥಿರ ಅಭಿವೃದ್ಧಿ ಸಾಧಿಸುವುದರಲ್ಲಿ ಸಹಕಾರಿಗಳ ಪಾತ್ರದ ಕುರಿತು ಒತ್ತಿ ಹೇಳಿದರು. ಅದರಲ್ಲೂ ಅಲ್ಲಿ ಸೇರಿರುವ 4 ಕೋಟಿಗೂ ಹೆಚ್ಚಿನ ವ್ಯವಹಾರವಿರುವ ಸಹಕಾರಿಗಳು “ವೃತ್ತಿ ನೈಪುಣ್ಯತೆ” ಹೆಚ್ಚಿಸಿಕೊಂಡು ಮಾದರಿ ಸಹಕಾರಿಗಳಾಗುವ ಅವಶ್ಯಕತೆ ಮತ್ತು ಅನಿವಾರ್ಯತೆ ಕುರಿತು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟರು. ಇತರೆ ತರಬೇತಿ ಕಾರ್ಯಕ್ರಮಗಳಿಗೂ “ಉನ್ನತ ಮಟ್ಟದ ತರಬೇತಿ” ಕಾರ್ಯಕ್ರಮಗಳಿಗೂ ವ್ಯತ್ಯಾಸ ತಿಳಿಸಿಕೊಟ್ಟರು.

ಸದರಿ ತರಬೇತಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀ ಯಶ್‌ಪಾಲ್ ಎ. ಸುವರ್ಣ ಮಾನ್ಯ ಅಧ್ಯಕ್ಷರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಹಕಾರಿ ಮೀನು ಮಾರಾಟ ಮಹಾಮಂಡಲ ನಿ., ಇವರು ಮಾತನಾಡಿ ಮಾನವೀಯತೆ ಮತ್ತು ಸೌಹಾರ್ದತೆಯನ್ನು ಬೆಳೆಸಿಕೊಂಡರೆ ಮಾತ್ರ ಸಹಕಾರ ಕ್ಷೇತ್ರದಲ್ಲಿ ಯಶಸ್ಸು ಕಾಣಲು ಸಾಧ್ಯ, ಇತರ ಕ್ಷೇತ್ರಗಳಿಗಿಂತ ಸಹಕಾರ ಕ್ಷೇತ್ರ ಮುನ್ನಡೆ ಸಾಧಿಸಿದ್ದು, ಇದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಎಲ್ಲರೂ ಸಾಗಬೇಕಿದೆ ಎಂದರು. ಹಾಗೂ ಸೌಹಾರ್ದ ಸಹಕಾರಿಗಳು ಮಾದರಿ ಸೌಹಾರ್ದ ಸಹಕಾರಿಗಳಾಗಬೇಕು ಎಂದರು.



ಸದರಿ ತರಬೇತಿ ಕಾರ್ಯಕ್ರಮಕ್ಕೆ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ್ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.ಇವರು ವಹಿಸಿಕೊಂಡಿದ್ದರು.

ಸದರಿ ಕಾರ್ಯಕ್ರಮದಲ್ಲಿ ಪ್ರಾಸ್ತವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ವೈ.ಕುಮಾರ್ ನಡೆಸಿಕೊಟ್ಟರು.

ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 43 ಸೌಹಾರ್ದ ಸಹಕಾರಿಗಳಿಂದ 43 ಮುಖ್ಯಕಾರ್ಯನಿರ್ವಾಹಕರು, 15 ಸೌಹಾರ್ದ ಸಹಕಾರಿಗಳಿಂದ 19 ಅಧ್ಯಕ್ಷರುಗಳು ಹಾಗೂ 5 ಸಹಕಾರ ಸಂಘಗಳಿಂದ 5 ಪ್ರತಿನಿಧಿಗಳು ಭಾಗವಹಿಸಿದ್ದರು.

ತರಬೇತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ವೈ.ವಿ.ಗುಂಡೂರಾವ್‌ರವರು “ಸೌಹಾರ್ದ ಸಹಕಾರಿಗಳಲ್ಲಿ ವ್ಯಾಪಾರ ಅಭಿವೃದ್ಧಿ ಯೋಜನೆ ” ಕುರಿತು ಶ್ರೀ ಕೆ.ಎಸ್. ಮಹದೇವಸ್ವಾಮಿ ರವರು “ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು” ಕುರಿತು ಹಾಗೂ ಡಾ. ಸುಧಾ ರವರು “ಜೀವನ ಸಬಲತೆ”ಗಳನ್ನು ಕುರಿತು ಉಪನ್ಯಾಸ ನೀಡಿದರು.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಮಂಜುನಾಥ್ ರವರು “ ಸಹಕಾರ ಕ್ಷೇತ್ರದ ಅವಕಾಶಗಳು ಹಾಗೂ ಸವಾಲುಗಳನ್ನು” ಕುರಿತು ಉಪನ್ಯಾಸ ನೀಡಿದರು.



"ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರಿಗಳ ಪಾತ್ರ" ಕುರಿತು ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ್ ರವರು ವಹಿಸಿದ್ದರು. ಶ್ರೀ ವೈ.ವಿ. ಗುಂಡುರಾವ್, ಶ್ರೀ ಸುದೀಶ್ ನಾಯಕ್, ಹಾಗೂ ಶ್ರೀ ಗಣೇಶ್ ನಾಯಕ್ ರವರು ಉಪಸ್ಥಿತರಿದ್ದು ಚರ್ಚೆಯಲ್ಲಿ ಭಾಗವಹಿಸಿದ್ದರು.

ಸೌಹಾರ್ದ ಸಹಕಾರಿಗಳ ಅಧ್ಯಕ್ಷರೊಡನೆ ಸಮಾಲೋಚನಾ ಸಭೆ ಹಾಗೂ ಸಮಾರೋಪ ಸಮಾರಂಭವನ್ನು ದಿನಾಂಕ : 28.08.2018 ರಂದು, ಮಧ್ಯಾಹ್ನ 2.30 ಗಂಟೆಗೆ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಎಚ್.ಕೃಷ್ಣಾರೆಡ್ಡಿ ರವರು ಸಮಾಲೋಚನಾ ಸಭೆ ಪ್ರಾರಂಭಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ್ ಸರ್‌ರವರು ವಹಿಸಿಕೊಂಡಿದ್ದರು. ವೇದಿಕೆಯ ಮೇಲೆ ಸಂಯುಕ್ತ ಸಹಕಾರಿಯ ಪ್ರಾಂತೀಯ ನಿರ್ದೇಶಕರಾದ ಶ್ರೀ ವೈ. ಕುಮಾರ್ ಹಾಗೂ ವಿಶ್ವನಾಥ್, ರಾಜು ಪೂಜಾರಿ, ಸುರೇಶ್ ರೈ, ಇವರುಗಳು ಉಪಸ್ಥಿತರಿದ್ದರು.

## ಸಮಾಲೋಚನಾ ಸಭೆ – ಕುಂದಾಪುರ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಎಚ್.ಕೃಷ್ಣಾರೆಡ್ಡಿ, ಇವರು ವಹಿಸಿ, ಸಹಕಾರಿಗಳ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಕರೊಂದಿಗೆ ಸಹಕಾರಿಗಳು ಎದುರಿಸುವ ಸಮಸ್ಯೆಗಳು ಕುರಿತು ಚರ್ಚಿಸಿ ಸಲಹೆ ನಿಡಿದರು.

1. ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಪ್ರಸಕ್ತ ಕಾರ್ಯಚಟುವಟಿಕೆಗಳ ಪ್ರಗತಿ ಬಗ್ಗೆ ಮಾಹಿತಿ ನೀಡುವುದು ಮತ್ತು ಸಮಾಲೋಚನೆ ಮಾಡುವುದು.
2. ಸೌಹಾರ್ದ ಸಹಕಾರಿ ಕ್ಷೇತ್ರದ ಸುಸ್ಥಿರ ಅಭಿವೃದ್ಧಿಯ (sustainable Growth of the souharda movement) ಬಗ್ಗೆ ಸಲಹೆಗಳನ್ನು ಪಡೆಯುವುದು ಹಾಗು ಮಾಹಿತಿ ನೀಡುವುದು.
3. ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳುವುದು ಹಾಗೂ ಪರಿಹಾರ ಸೂಚಿಸುವುದು.
4. ದಿನಾಂಕ 7–9–2018 ರಂದು ಅರಮನೆ ಮೈದಾನದಲ್ಲಿ ವ್ಯವಸ್ಥೆ ಮಾಡಿರುವ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕ್ರಮಗಳ ಪೂರ್ವಭಾವಿ ಅವಲೋಕನೆ.
5. ಸಂಯುಕ್ತ ಸಹಕಾರಿಯ ಕೇಂದ್ರ ಕಚೇರಿ, ಬೆಳಗಾವಿ, ಕಲಬುರಗಿ, ಮೈಸೂರು ಪ್ರಾಂತೀಯ ಕಚೇರಿಗಳಿಗೆ ಹಾಗೂ ತುಮಕೂರು ರಸ್ತೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ಸ್ವಂತ ಕಟ್ಟಡಗಳ ನಿರ್ಮಾಣದ ವ್ಯವಸ್ಥೆಗಳ ಬಗ್ಗೆ ಚರ್ಚೆ.
